## ಸಾಹಿತ್ಯ ಸಿಂಚನ

### ವಿಶ್ವಮಾನವ

ಜಾತಿ ಧರ್ಮದ ಗೋಡೆಗಳನು ಒಡೆದು,
ಪ್ರೀತಿಯ ದೀಪವ ಹೃದಯದಿ ಬೆಳಗಿಸೋಣ.
ಮಾನವೀಯತೆಯ ಹೂವನು ಅರಳಿಸಿ,
ವಿಶ್ವವನ್ನೆಲ್ಲ ಕುಟುಂಬವೆಂದು ಕಾಣೋಣ.
ಕರುಣೆಯ ಮಾತು ಜೀವನದ ಮಂತ್ರ,
ಸಹನೆಯ ದಾರಿ ಶಾಂತಿಯ ತಂತ್ರ.
ದ್ವೇಷವ ಬಿಟ್ಟು ಸ್ನೇಹವ ಬೆಳೆಸೋಣ,
ಸೌಹಾರ್ದದ ಬೀಜವ ಭುವಿಯಲಿ ಬಿತ್ತೋಣ.
ಬಣ್ಣ ಭಾಷೆಯ ಭೇದವಿಲ್ಲ ಇಲ್ಲಿ,
ಎಲ್ಲರೂ ಒಂದೇ ಮಾನವಕುಲದ ಬೆಳ್ಳಿ.
ಪ್ರೀತಿ, ದಯೆ, ಸೇವೆಯೇ ನಮ್ಮ ಧರ್ಮ,
ಅದೇ ವಿಶ್ವಮಾನವನ ಶಾಶ್ವತ ಕರ್ಮ.
ಭೂಮಿ ನಮ್ಮ ಮನೆ, ಜನರೆಲ್ಲ ಬಂಧು,
ಮಾನವೀಯತೆಯೇ ಬದುಕಿನ ಸಿಂಧು.
ವಿಶ್ವವೊಂದೇ ಎಂಬ ಭಾವನೆ ಹೊತ್ತು,
ಬೆಳಗೋಣ ನಾವು ಪ್ರೀತಿಯ ದೀಪ ಹೊತ್ತು.

## ಎಸ್. ರಾಮಪ್ಪಗೆ ಸಂಗೀತ ಭಾರತಿ ಸಮಾಜ ಸೇವಾ ಭಾರ್ಗವ ಪ್ರಶಸ್ತಿ

o ನೈಜ್ಯ ದೆಸೆ ನ್ಯೂಸ್




ಬಳ್ಳಾರಿ / ಕಂಪ್ಲಿ : ತಾಲೂಕಿನ ಎಮ್ಮಿಗನೂರು ಗ್ರಾಮದ ಸರಕಾರಿ ಶತಮಾನ ಶಾಲೆಯ ಗೌರವ ಶಿಕ್ಷಕ, ನಿರೂಪಕ, ಸಂಪನ್ಮೂಲ ವ್ಯಕ್ತಿ ಎಸ್. ರಾಮಪ್ಪ ಅವರ ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರದ ಸಾಧನೆಯನ್ನು ಪರಿಗಣಿಸಿ ವಿಜಯನಗರ ಜಿಲ್ಲೆ ಹೊಸಪೇಟ ಚಿತ್ತವಾಡಿಗೆಯ ಅತ್ಯುತ್ತಮ ಸಂಘಟನಾ ಪ್ರಶಸ್ತಿ ಪುರಸ್ಕೃತ ಸಾಮಾಜಿಕ ಸೇವಾ ಸಂಸ್ಥೆ ಸಂಗೀತ ಭಾರತಿ ವತಿಯಿಂದ 415ನೇ ಮಾಸಿಕ ಚಿಂತನ ಸಂಭ್ರಮ ಕಾರ್ಯಕ್ರಮದಲ್ಲಿ ಸಂಗೀತ ಭಾರತಿ ಸಮಾಜ ಸೇವಾ ಭಾರ್ಗವ ಪ್ರಶಸ್ತಿ ನೀಡಿ ಗೌರವಿಸಲಾಯಿತು.ನಂತರ ಪ್ರಶಸ್ತಿ ಸ್ವೀಕರಿಸಿ ಎಸ್. ರಾಮಪ್ಪ ಮಾತನಾಡಿ, ಸಂಸ್ಥೆಯ ವ್ಯವಸ್ಥಾಪಕರಾದ ಎಚ್. ಪಿ. ಕಲ್ಲಂಭಟ್, ಅವರು ಎಲೆಮರೆಕಾಯಿಯಂತಿರುವ ಸಾಧಕರನ್ನು ಗುರುತಿಸಿ, ಪ್ರಸಸ್ತಿ ನೀಡುತ್ತಿರುವುದು ಪ್ರಶಂಶನೀಯವಾದುದು, ನನ್ನ ಸಾಧನೆ ಗುರುತಿಸಿ ಪ್ರಶಸ್ತಿನೀಡಿರುವುದು ಸಂತಸದೊಂದಿಗೆ ಇನ್ನಷ್ಟು ಉತ್ತಮ ಕಾರ್ಯಗಳನ್ನು ಮಾಡಲು ಪ್ರೇರಣೆ ನೀಡಿದೆ ಎಂದರು.ಈ ಸಂದರ್ಭದಲ್ಲಿ ಸಂಗೀತ ಭಾರತೀಯ ವ್ಯವಸ್ಥಾಪಕರಾದ ಎಚ್. ಪಿ. ಕಲ್ಲಂಭಟ್, ರೈತಪರ ಹೋರಾಟಗಾರರಾದ ಬಸವರಾಜ್ ಇದ್ದರು.ವರದಿ : ಜಿಲಾನಸಾಬ್ ಬಡಿಗೇರ್

## ರಕ್ತದಾನ ಶಿಬಿರದಲ್ಲಿ 39 ಬಾರಿ ರಕ್ತದಾನ ಮಾಡಿದ ದೇವರಾಜ ದೇಸಾಯಿಗೆ ಸನ್ಮಾನ

o ನೈಜ್ಯ ದೆಸೆ ನ್ಯೂಸ್



ತಾಳಿಕೋಟಿ: ಪಟ್ಟಣದಲ್ಲಿ ಅಮ್ಮಾ ಫೌಂಡೇಶನ್ ವತಿಯಿಂದ ಶನಿವಾರ ಶ್ರೀ ಕಾಳಿಕಾ ದೇವಸ್ಥಾನದಲ್ಲಿ ಹಮ್ಮಿಕೊಂಡ ಬೃಹತ್ ರಕ್ತದಾನ ಶಿಬಿರದಲ್ಲಿ 39 ಬಾರಿ ರಕ್ತದಾನ ಮಾಡಿದ ತಾಳಿಕೋಟಿ ತಾಲೂಕಿನ ಶಳ್ಳಗಿ ಗ್ರಾಮದ ದೇವರಾಜ ದೇಸಾಯಿ ಇವರನ್ನು ಫೌಂಡೇಶನ್ ವತಿಯಿಂದ ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು. ಈ ಸಮಯದಲ್ಲಿ ಫೌಂಡೇಶನ್ ಅಧ್ಯಕ್ಷರಾದ ಬಸಮ್ಮಾ ಕಾಶೀರಾಯ ಮಣ್ಣೂರ, ಉಪಾಧ್ಯಕ್ಷೆ ಸುರೇಖಾ ಬಿಳೇಭಾವಿ, ಕಾರ್ಯದರ್ಶಿ ಸುಮಂಗಲಾ ಕೋಳೂರ, ಪದಾಧಿಕಾರಿಗಳಾದ ಸುರೇಖಾ ಸಾಲಂಕಿ, ಅನಿತಾ ಸಜ್ಜನ್ ಡಾ.ಗಂಗಾಂಬಿಕಾ ಪಾಟೀಲ, ಗೀತಾ ಪತ್ತಾರ, ಚೆನ್ನಮ್ಮ ಕತ್ತಿ, ಗುರುಬಾಯಿ ಮಣ್ಣೂರು ಹಾಗೂ ಜ್ಯೋತಿಬಾ ಕೊಡಗೆ ಇದ್ದರು.

## ಪತ್ರಿಕೋದ್ಯಮ ಸಾಧಕರಿಗೆ ಸನ್ಮಾನ: ದೇವದುರ್ಗದಲ್ಲಿ ಅದ್ಧೂರಿಯಾಗಿ ಪತ್ರಿಕಾ ದಿನಾಚರಣೆ

o ನೈಜ್ಯ ದೆಸೆ ನ್ಯೂಸ್



ದೇವದುರ್ಗ, ಜು.25: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ದೇವದುರ್ಗ ತಾಲೂಕು ಘಟಕದ ವತಿಯಿಂದ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮವನ್ನು ಶಾಸಕಿ ಶ್ರೀಮತಿ ಕರೆಮ್ಮ ಜಿ. ನಾಯಕ ಅವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ಶಾಸಕಿ ಕರೆಮ್ಮ ಜಿ. ನಾಯಕ ಅವರು, ಸಮಾಜದ ಸಮಸ್ಯೆಗಳನ್ನು ಆಡಳಿತದ ಗಮನಕ್ಕೆ ತರುವಲ್ಲಿ ಪತ್ರಕರ್ತರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಗ್ರಾಮೀಣ ಪ್ರದೇಶಗಳ ಜನರ ನೋವು, ಸಮಸ್ಯೆಗಳು, ಅಭಿವೃದ್ಧಿ ಬೇಡಿಕೆಗಳು ಹಾಗೂ ಸಾರ್ವಜನಿಕ ಹಿತಾಸಕ್ತಿಯ ವಿಷಯಗಳನ್ನು ನಿರಂತರವಾಗಿ ಬೆಳಕಿಗೆ ತರುವ ಮೂಲಕ ಪತ್ರಕರ್ತರು ಸಮಾಜದ ಕಣ್ಣು ಮತ್ತು ಕಿವಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದರು.ಪತ್ರಕರ್ತರು ಸತ್ಯನಿಷ್ಠೆ, ವಸ್ತುನಿಷ್ಠತೆ ಹಾಗೂ ಸಾಮಾಜಿಕ ಹೊಣೆಗಾರಿಕೆಯಿಂದ ವರದಿ ಮಾಡಬೇಕು. ಜನರ ವಿಶ್ವಾಸವನ್ನು ಉಳಿಸಿಕೊಳ್ಳುವುದು ಪತ್ರಿಕೋದ್ಯಮದ ಪ್ರಮುಖ ಜವಾಬ್ದಾರಿಯಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.ವಿಶೇಷ ಉಪನ್ಯಾಸ ನೀಡಿದ ಕಲಬುರಗಿ ಮಾಹಿತಿ ಆಯೋಗದ ಆಯುಕ್ತ ಬಿ. ವೆಂಕಟಸಿಂಗ್ ಅವರು, 'ಮಾಧ್ಯಮದ ಇಂದಿನ ಸ್ಥಿತಿಗತಿ' ಕುರಿತು ಮಾತನಾಡಿದರು. ಹಿಂದೆ ಪತ್ರಿಕೆಯಲ್ಲಿ ಸಾರ್ವಜನಿಕ ಸಮಸ್ಯೆಗಳ ಕುರಿತು ಸುದ್ದಿ ಪ್ರಕಟವಾದರೆ ಅಧಿಕಾರಿಗಳು ತಕ್ಷಣ ಎಚ್ಚೆತ್ತುಕೊಂಡು ಕ್ರಮ ಕೈಗೊಳ್ಳುತ್ತಿದ್ದರು. ಆದರೆ ಇಂದು ಕ್ಷಣಕ್ಷಣದ ಮಾಹಿತಿಯನ್ನು ಸಾಮಾಜಿಕ ಜಾಲತಾಣಗಳಲ್ಲಿ ನೋಡುವ ಪ್ರವೃತ್ತಿ ಹೆಚ್ಚಾಗಿದೆ. ಇದು ಮುದ್ರಣ ಮಾಧ್ಯಮಗಳಿಗೆ ಎಚ್ಚರಿಕೆಯ ಗಂಟೆಯಾಗಿದೆ ಎಂದರು.ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿ ವೇಗವಾಗಿ ಹರಡುತ್ತಿದ್ದರೂ ಅದರ ಸತ್ಯಾಸತ್ಯತೆ ಕುರಿತು ಹಲವು ಪ್ರಶ್ನೆಗಳು ಎದುರಾಗುತ್ತವೆ. ವಾಸ್ತವಾಂಶಗಳನ್ನು ಖಚಿತಪಡಿಸಿಕೊಂಡು ಓದಲು ಜನರು ಈಗಲೂ ಪತ್ರಿಕೆಗಳನ್ನೇ ನಂಬುತ್ತಾರೆ. ಈ ವಿಶ್ವಾಸವನ್ನು ಕಾಪಾಡಿಕೊಳ್ಳಲು ಪತ್ರಕರ್ತರು ಪರಿಶೀಲಿತ ಹಾಗೂ ನಿಖರ ಸುದ್ದಿಗಳಿಗೆ ಆದ್ಯತೆ ನೀಡಬೇಕು ಎಂದು ಕಿವಿಮಾತು ಹೇಳಿದರು.ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳು, ಗಣ್ಯರು ಹಾಗೂ ಪತ್ರಕರ್ತರನ್ನು ಗೌರವಿಸಲಾಯಿತು. ವೆಂಕಟೇಶ್ ಗಲಗ, ಶಿವರಾಜ್ ಪೂಜಾರಿ, ತಾಲೂಕು ದಂಡಾಧಿಕಾರಿ ನಾಗಮ್ಮ ಎಂ. ಕಟ್ಟಿಮನಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಸಮಿತಿ ಸದಸ್ಯ ಬಸವರಾಜ್ ನಾಗಡದಿನ್ನಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿದ್ದಯ್ಯಸ್ವಾಮಿ ಕುಕನೂರು, ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷೆ ಜ್ಯೋತಿ ಲಕ್ಷ್ಮಣ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಹನುಮಂತರಾಯ ಸೇರಿದಂತೆ ಹಲವರು ಭಾಗವಹಿಸಿದ್ದರು.ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ನರಸಿಂಗರಾವ್ ಸರ್ಕಿಲ್, ಪ್ರಧಾನ ಕಾರ್ಯದರ್ಶಿ ನಾಗರಾಜ್, ಹಿರಿಯ ಪತ್ರಕರ್ತರಾದ ನಾಗರಾಜ್ ಸುಟ್ಟಿ, ಅಮರೇಶ್ ಚಿಲ್ಕರಾಗಿ, ಸುರೇಶ್ ಗೌಡ, ನಾಗರಾಜ್ ಮುನ್ನಾಪುರಿ ಸೇರಿದಂತೆ ತಾಲೂಕಿನ ವಿವಿಧ ಭಾಗಗಳ ಪತ್ರಕರ್ತರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ 2026ನೇ ಸಾಲಿನ ವಿವಿಧ ಪತ್ರಿಕೋದ್ಯಮ ಪ್ರಶಸ್ತಿಗಳನ್ನು ಪ್ರದಾನ ಮಾಡಿ ಸಾಧಕ ಪತ್ರಕರ್ತರನ್ನು ಸನ್ಮಾನಿಸಲಾಯಿತು.ಎ. ವೆಂಕಟೇಶ ನಾಯಕ ಅವರ ಸ್ಮರಣಾರ್ಥ ನೀಡಲಾಗುವ 'ದುರ್ಗದ ಸಿರಿ' ಪ್ರಶಸ್ತಿಗೆ ವೀರೇಶ ಶಾಸಂ ಗಟ್ಟೂರು, ನಾಗರಾಜ ವಾರದ ದೇವದುರ್ಗ, ಅಜೀರ್ ನಡಾಫ್ ಅರಕೇರಾ, ಮೌನೇಶ ಜಾಲಹಳ್ಳಿ, ರಮೇಶ ಖಾನಾಪೂರು ಗಟ್ಟೂರು, ಹನುಮಂತರಾಯ ನಾಯಕ ಹಿರೇಬೂದೂರು, ಬಸನಗೌಡ ಆಳ್ಳುಂಡಿ ದೇವದುರ್ಗ ಹಾಗೂ ಬುಡೇಪ್ಪ ಛಲವಾದಿ ಗಟ್ಟೂರು ಅವರು ಭಾಜನರಾದರು.ರಘುನಾಥ ಸಿಂಗ್ ಬೊಮ್ಮನಾಳ ಅವರ ಸ್ಮರಣಾರ್ಥ ನೀಡಲಾಗುವ ಡಿ.ವಿ. ಗುಂಡಪ್ಪ ಪ್ರಶಸ್ತಿಯನ್ನು ಪತ್ರಕರ್ತ ಯಮುನೇಶ ಗೌಡಗೇರಾ ಅವರಿಗೆ ಪ್ರದಾನ ಮಾಡಲಾಯಿತು.ವೆಂಕಟೇಶ ಪೂಜಾರಿ ಅವರ ಸ್ಮರಣಾರ್ಥ ನೀಡಲಾಗುವ ಪಾಟೀಲ್ ಪುಟ್ಟಪ್ಪ ಪ್ರಶಸ್ತಿಯನ್ನು ಎಸ್. ಗುಡಿ ಅವರಿಗೆ ನೀಡಿ ಗೌರವಿಸಲಾಯಿತು.ಹಿರಿಯ ಪತ್ರಕರ್ತ ಅಯ್ಯಣ್ಣ ವಾರದ ಅವರ ಸ್ಮರಣಾರ್ಥ ನೀಡಲಾಗುವ 'ಮಾಧ್ಯಮ ಸಿರಿ ಪ್ರಶಸ್ತಿಯನ್ನು' ಗಟ್ಟೂರಿನ ಹಿರಿಯ ಪತ್ರಕರ್ತ ಎಸ್. ಏಳುಭಾವೆಪ್ಪಗೌಡ ಅವರಿಗೆ ಪ್ರದಾನ ಮಾಡಲಾಯಿತು.ಪ್ರಶಸ್ತಿ ಪುರಸ್ಕೃತರಿಗೆ ಗಣ್ಯರು ಪ್ರಶಸ್ತಿ ಫಲಕ, ಸ್ಮರಣಿಕೆ ಹಾಗೂ ಗೌರವ ಸಮರ್ಪಿಸಿ ಅಭಿನಂದಿಸಿದರು. ಇದೇ ವೇಳೆ ಪುರಸ್ಕೃತ ಪತ್ರಕರ್ತರ ಸ್ನೇಹಿತರು, ಅಭಿಮಾನಿಗಳು ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಪ್ರತ್ಯೇಕವಾಗಿ ಸನ್ಮಾನಿಸಿ ಶುಭ ಹಾರೈಸಿದರು.ಪತ್ರಕರ್ತರನ್ನು ಗುರುತಿಸಿ ಗೌರವಿಸುವ ಉದ್ದೇಶದಿಂದ ಅಚ್ಚುಕಟ್ಟಾಗಿ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಅಧಿಕಾರಿಗಳು, ಜನಪ್ರತಿನಿಧಿಗಳು, ವಿವಿಧ ಸಂಘಟನೆಗಳ ಮುಖಂಡರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಪತ್ರಿಕೋದ್ಯಮ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವವರನ್ನು ಗುರುತಿಸಿ ಗೌರವಿಸಿರುವುದು ಕಾರ್ಯಕ್ರಮದ ವಿಶೇಷತೆಯಾಗಿತ್ತು.ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

## ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಂಪ್ಲಿ ತಾಲೂಕು ಘಟಕದ ಅಧ್ಯಕ್ಷರಾಗಿ ವಸಂತ. ವಿ ಪ್ರಧಾನ ಕಾರ್ಯದರ್ಶಿಯಾಗಿ ಜೋಗಿ ರುದ್ರಪ್ಪ ನಾಯಕ್ ಆಯ್ಕೆ

o ನೈಜ್ಯ ದೆಸೆ ನ್ಯೂಸ್



ಬಳ್ಳಾರಿ / ಕಂಪ್ಲಿ : ಪಟ್ಟಣದ ಯ ಎಸ್ . ಎನ್. ಪೇಟೆ ಶಾಲೆಯ ಆವರಣದಲ್ಲಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ (ರಿ) ಬೆಂಗಳೂರು, ರಾಜ್ಯ ಕಾರ್ಯಧ್ಯಕ್ಷರಾದ ಶ್ರೀ ನಾಗನಗೌಡ. ಎಂ. ಎ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕಂಪ್ಲಿತಾಲೂಕು ಘಟಕ ರಚನೆ ಮಾಡಲಾಯಿತು. ಅಧ್ಯಕ್ಷ – ಶ್ರೀ ವಸಂತ. ವಿ ಪ್ರಧಾನ ಕಾರ್ಯದರ್ಶಿ – ಜೋಗಿ ರುದ್ರಪ್ಪ ನಾಯಕ್ ಗೌರವ ಅಧ್ಯಕ್ಷ – ಚಂದ್ರಶೇಖರ ಶೆಟ್ರು, ಕಾರ್ಯಧ್ಯಕ್ಷ – ಸೋಮಶೇಖರ್, ಹಿರಿಯ ಉಪಾಧ್ಯಕ್ಷರಾಗಿ – ಹನುಮನಗೌಡ, ಖಲೀಲ್ ಸಾಬ್, ರೂಪಕಲಾ, ರೇವಣಸಿದ್ದೇಶ, ಉಪಾಧ್ಯಕ್ಷರು (ಮಹಿಳೆ ) – ಶಾಂತಾ ಗಡ್ಡದ, ಖಜಾಂಚಿ – ಪರಶುರಾಮ್ ಪವಾರ್, ಸಹಕಾರ್ಯದರ್ಶಿ – ಶಂಕರ ಮೂರ್ತಿ, ಸಹಕಾರ್ಯದರ್ಶಿ (ಮಹಿಳೆ ) – ನಜಾಹತ್ ಜಬೀಲ್, ಸಂಘಟನಾ ಕಾರ್ಯದರ್ಶಿ – ಬಸವರಾಜ್ ಶಿಡೆಗಲ್ ಸಂಘಟನಾ ಕಾರ್ಯದರ್ಶಿ (ಮಹಿಳೆ ) – ರತ್ನಮ್ಮ ಬಡಿಗೇರ್, ಕ್ರೀಡಾ ಮತ್ತು ಸಂಸ್ಕೃತಿಕ ಕಾರ್ಯದರ್ಶಿಗಳಾಗಿ ಶ್ರೀ ವಿರೇಶ್, ಶ್ರೀಮತಿ ತಿಪ್ಪಮ್ಮ, ಶ್ರೀಮತಿ ಪರಿಮಳ, ಶ್ರೀಮತಿ ಉಷಾರಾಣಿ ಶ್ರೀಮತಿ ಪುಷ್ಪವತಿ, ಶ್ರೀ ಶಶಿಧರ್ ಅಕ್ಕಸಾಲಿ ಶ್ರೀ ಬಸವರಾಜ್ ಅಕ್ಕಸಾಲಿ ಮಾಧ್ಯಮ ಸಲಹೆಗರಾರು ಶ್ರೀ ವಿಶ್ವನಾಥ್, ಶ್ರೀ ವೀರಭದ್ರಪ್ಪ,ಕಾರ್ಯಕಾರಿ ಸಮಿತಿ ಸದಸ್ಯರಾಗಿ ಶ್ರೀಮತಿ ಲತಾ, ಶ್ರೀಮತಿ ಚೈತ್ರ, ಶ್ರೀ ಗುರುಸಿದ್ದಪ್ಪ,ಶ್ರೀಮತಿ ಚಂದ್ರಪ್ಪ, ಶ್ರೀಮತಿ ರೇಖಾ,ಶ್ರೀಮತಿ ವಿಜಯಲಕ್ಷ್ಮಿ, ಶ್ರೀಮತಿ ಸಂಗನಗೌಡ, ಶ್ರೀಮತಿ ಭೂಮೇಶ್, ಶ್ರೀಮತಿ ಸುಮಿತ್ರ ದೇಸಾಯಿ, ಶ್ರೀಮತಿ ಸುಮಿತ್ರಾ, ಶ್ರೀ , ಶ್ರೀಮತಿ ನೇತ್ರಾವತಿ, ಶ್ರೀಮತಿ ಸುದರ್ಶನಮ್ಮ, ಶ್ರೀಮತಿ ಜ್ಯೋತಿ. ಪಿ.ಎಂ, ಶ್ರೀಮತಿ ಜ್ಞಾನ ಲಕ್ಷ್ಮಿ, ಶ್ರೀ ನಾಗರಾಜ್ ಶಾಂತಿನಗರ, ಶ್ರೀಮತಿ ಸವಿತಾ, ಶ್ರೀಮತಿ ಗಂಗಮ್ಮ ಮುದ್ದಾಪುರ,ಶ್ರೀ ರಮೇಶ್ ಪೂಜಾರ್ ಅವಿರೋಧವಾಗಿ ಆಯ್ಕೆಯಾದರು. ವರದಿ : ಜಿಲಾನಸಾಬ್ ಬಡಿಗೇರ್

## ಉಮೇಶ್ ಪತ್ತಾರರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಉದ್ಘಾಟನೆ ಚಿತ್ರಕಲಾ ಶಿಕ್ಷಕರ ನೇಮಕವಾಗಬೇಕು – ವಾಜಿದ್ ಸಾಜಿದ್ ಆಗ್ರಹ

o ನೈಜ್ಯ ದೆಸೆ ನ್ಯೂಸ್






ಮಾತನಾಡಿ ಬದುಕಿಗೆ ಹಣ ಅವಶ್ಯಕ. ಆದರೆ ಹಣಗಳಿಸುವುದೇ ಬದುಕಾಗಬಾರದು.

ಸಿಂಧನೂರು 26 : ಸಿಂಧನೂರಿನ ಸರ್ವೋದಯ ಶಾಲೆಯ ಬಳಿ ಇರುವ ವಿರಿಂಚಿ ಆರ್ಟ್ ಗ್ಯಾಲರಿಯಲ್ಲಿ ಭಾನುವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಚಿತ್ರ ಕಲಾವಿದ ಉಮೇಶ್ ಪತ್ತಾರ್ 'ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ' ವನ್ನು ಮಾನ್ವಿಯ ಹಿರಿಯ ಚಿತ್ರಕಲಾವಿದ ವಾಜಿದ್ ಸಾಜಿದ್ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು ಚಿತ್ರಕಲಾವಿದರು ಶ್ರದ್ಧೆ ಪ್ರಯತ್ನ ಮತ್ತು ಛಲ ಅಳವಡಿಸಿಕೊಳ್ಳಬೇಕು. ರಾಯಚೂರು ಜಿಲ್ಲೆ 80ರ ದಶಕದಲ್ಲಿ ಚಿತ್ರಕಲಾವಿದರ ಕ್ಷೇತ್ರದಲ್ಲಿ ಹಿಂದುಳಿದಿತ್ತು ಆದರೆ ಈಗ ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ನೂರಾರು ಚಿತ್ರಕಲಾವಿದರು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಳೆದಿದ್ದಾರೆ. ಸರ್ಕಾರ ಕಳೆದ ಅನೇಕ ವರ್ಷಗಳಿಂದ ಚಿತ್ರಕಲಾ ಶಿಕ್ಷಕರನ್ನು ನೇಮಕ ಮಾಡಿಕೊಂಡಿಲ್ಲ. ಕೂಡಲೇ ನೇಮಕ ಮಾಡಿಕೊಂಡು ಅವರ ಬದುಕಿಗೆ ನೆರವಾಗಬೇಕು ಎಂದು ಅಗ್ರಹಿಸಿದರು. ಉಪನ್ಯಾಸಕ ಗೋವಿಂದರಾಜ ಬಾರಿಕೇರ ಕಲಾವಿದರು ಸಹ ತಮ್ಮ ಕಲೆಯನ್ನು ಪ್ರದರ್ಶಿಸುವ ಬದ್ಧತೆಯನ್ನು ಹೊಂದಿರಬೇಕು ಎಂದು ರಮಣ ಮಹರ್ಷಿಗಳ ಉದಾಹರಣೆಯೊಂದಿಗೆ ವಿವರಿಸಿದರು. ಪತ್ರಕರ್ತ ಪ್ರಹ್ಲಾದ ಗುಡಿ ವಕೀಲ ಮಾತನಾಡಿ ಸರ್ಕಾರ ಬಡ ಕಲಾವಿದರನ್ನು ಪ್ರೋತ್ಸಾಹಿಸುವ ಹಿನ್ನೆಲೆಯಲ್ಲಿ ಅನೇಕ ಯೋಜನೆಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನೀಡುತ್ತಾ ಬಂದಿದೆ. ಪ್ರಸ್ತುತ ಚಿತ್ರಕಲಾವಿದ ಉಮೇಶ್ ಪತ್ತಾರ್ ಸಹ ಇಲಾಖೆಯ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತಿರುವುದು ಇತರೆ ಕಲಾವಿದರಿಗೆ ಪ್ರೇರಣೆಯಾಗಿದೆ ಎಂದರು. ಬಿಜೆಪಿ ಮುಖಂಡ ನಬಿಸಾಬ ಅನಗವಾಡಿ ಮಾತನಾಡಿ ಬೆಂಗಳೂರಿನಲ್ಲಿ ರಾಷ್ಟ್ರೀಯ ಚಿತ್ರಕಲಾ ಸಂತೆಯನ್ನು ಸಪ್ಟೆಂಬರ್ ನಲ್ಲಿ ತಮ್ಮ ಟ್ರಸ್ಟ್ ನಿಂದ ಏರ್ಪಡಿಸುವ ಉದ್ದೇಶ ಹೊಂದಲಾಗಿದೆ. ಈ ಭಾಗದ ಚಿತ್ರಕಲಾವಿದರನ್ನು ಗುರುತಿಸಿ ಅವಕಾಶ ಕಲ್ಪಿಸಲಾಗುವುದು ಜೊತೆಗೆ ಟ್ರಸ್ಟ್ ವತಿಯಿಂದ ಎಲ್ಲ ರೀತಿಯ ಸಹಾಯ ಸಹಕಾರ ನೀಡಲಾಗುವುದು ಎಂದು ಭರವಸೆ ನೀಡಿದರು. ಸರಕಾರಿ ನೌಕರರ ಸಂಘದ ಉಪಾಧ್ಯಕ್ಷ ಹನುಮಂತ ಹೆಗ್ಗಾಪುರ, ನಾಗೇಂದ್ರ ಕುಮಾರ್ ಸಾಹುಕಾರ ವಕೀಲ ಲೋಕೋಪಯೋಗಿ ಇಲಾಖೆಯ ಅಧಿಕಾರಿ ನಾರಾಯಣರಾವ್ ದೇಸಾಯಿ, ಯುವ ಮುಖಂಡ ವೆಂಕಟೇಶ ಬಾದರ್ಲಿ ಮಾತನಾಡಿದರು. ಅಧ್ಯಕ್ಷತೆಯನ್ನು ವೀರಿಂಚಿ ಆರ್ಟ್ ಗ್ಯಾಲರಿ ಮುಖ್ಯಸ್ಥ ಶಿವಾನಂದ ಸಾತಿಹಾಳ ವಹಿಸಿದ್ದರು. ಮಲ್ಲಯ್ಯ ಕೆಂಭಾವಿ ನಿರೂಪಿಸಿದರು. ವೀಕ್ಷಣೆ– ಜಾನಪದ ಶೈಲಿ,ತೈಲ ವರ್ಣ, ಸೇರಿದಂತೆ ವಿವಿಧ ಕಲಾ ಕೃತಿಗಳನ್ನು ಚಿತ್ರಕಲಾವಿದರು ಹಾಗೂ ಗಣ್ಯರು ವೀಕ್ಷಿಸಿದರು. ಚಿತ್ರ ಕಲಾವಿದ ಉಮೇಶ ಪತ್ತಾರ ತಾವು ಬಿಡಿಸಿದ ಸಿಂಧನೂರಿನ ಸುತ್ತಮುತ್ತ ನಿಸರ್ಗ ಚಿತ್ರಗಳ ಹಾಗೂ ಇಂಡಿಯನ್ ಬುಕ್ ಆಫ್ ರೆಕಾರ್ಡ್ ಮತ್ತು ಗಿನ್ನಿಸ್ ವರ್ಲ್ಡ್ ರೆಕಾರ್ಡ್ ದಾಖಲೆಯಾದ ಕಲಾಕೃತಿಗಳ ಕುರಿತು ವಿವರಿಸಿದರು. ಕಲಾವಿದರಾದ ರಾಮೇಶಪ್ಪ, ಮಹಮ್ಮದ್ ಉಸ್ಮಾನ್ ಅಲಿ, ಅನುರಾಧ, ಅಂಬಣ್ಣ, ಪ್ರಸನ್ನ ಪತ್ತಾರ್, ದೀಕ್ಷಾ,ಮನು ಪ್ರದರ್ಶನದಲ್ಲಿ ಭಾಗವಹಿಸಿದ್ದರು.

## ಮುಧೋಳದಲ್ಲಿ 2.6 ಕೆ.ಜಿ. ಗರ್ಭಕೋಶದ ಗಡ್ಡೆ ಯಶಸ್ವಿ ತೆರವು

o ನೈಜ್ಯ ದೆಸೆ ನ್ಯೂಸ್



*ಮುಧೋಳ*: ನಗರದ ಪೊಲೀಸ್ ರಾಣಿ ರಸ್ತೆಯಲ್ಲಿರುವ ಮಲಘಾಣ ಆಸ್ಪತ್ರೆಯಲ್ಲಿ ವೈದ್ಯರು ಅಪರೂಪದ ಶಸ್ತ್ರಚಿಕಿತ್ಸೆ ಮಾಡಿ 42 ವರ್ಷದ ಮಹಿಳೆಯ ಗರ್ಭಕೋಶದಲ್ಲಿದ್ದ 2.6 ಕೆ.ಜಿ ತೂಕದ ಬೃಹತ್ ಗಡ್ಡೆಯನ್ನು ಯಶಸ್ವಿಯಾಗಿ ತೆಗೆದುಹಾಕಿದ್ದಾರೆ.ಕಳೆದ ಹಲವು ತಿಂಗಳಿನಿಂದ ತೀವ್ರ ಹೊಟ್ಟೆ ನೋವಿನಿಂದ ಬಳಲುತ್ತಿದ್ದ ಮಹಿಳೆ ಮುಧೋಳದ ಮಲಘಾಣ ಆಸ್ಪತ್ರೆಗೆ ದಾಖಲಾಗಿದ್ದರು. ಹಿರಿಯ ಸ್ತ್ರೀರೋಗ ತಜ್ಞ ಡಾ. ವೀರೇಂದ್ರ ಕೊಟಬಾಳ್ ಅವರು ವಿವಿಧ ವೈದ್ಯಕೀಯ ಪರೀಕ್ಷೆಗಳನ್ನು ನಡೆಸಿದಾಗ, ರೋಗಿಯ ಗರ್ಭಕೋಶದಲ್ಲಿ ಸುಮಾರು 2.6 ಕೆ.ಜಿ ತೂಕದ ದೊಡ್ಡ ಗಡ್ಡೆ ಇರುವುದು ಪತ್ತೆಯಾಯಿತು.ಕೂಡಲೇ ಶಸ್ತ್ರಚಿಕಿತ್ಸೆಗೆ ನಿರ್ಧರಿಸಲಾಯಿತು. 2 ಗಂಟೆಗೂ ಅಧಿಕ ಕಾಲ ನಡೆದ ಈ ಜಟಿಲ ಶಸ್ತ್ರಚಿಕಿತ್ಸೆಯಲ್ಲಿ ವೈದ್ಯರ ತಂಡ ಗಡ್ಡೆಯನ್ನು ಸಂಪೂರ್ಣವಾಗಿ ಹೊರತೆಗೆದರು. ಆಸ್ಪತ್ರೆ ಮೂಲಗಳ ಪ್ರಕಾರ, ಶಸ್ತ್ರಚಿಕಿತ್ಸೆಯ ಬಳಿಕ ರೋಗಿಯ ಆರೋಗ್ಯ ಸ್ಥಿರವಾಗಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ.ಈ ಯಶಸ್ವಿ ಶಸ್ತ್ರಚಿಕಿತ್ಸೆಯಲ್ಲಿ ಡಾ. ವೀರೇಂದ್ರ ಕೊಟಬಾಳ್ ಅವರೊಂದಿಗೆ ಡಾ. ದೀಪಕ್ ಮಾಸರಡ್ಡಿ, ಡಾ. ಆಶಾ ಮಲಘಾಣ ಮತ್ತು ಆಸ್ಪತ್ರೆ ಸಿಬ್ಬಂದಿ ಸಹಕರಿಸಿದರು.ಈ ರೀತಿಯ ಬೃಹತ್ ಗರ್ಭಕೋಶದ ಗಡ್ಡೆ ತೆಗೆಯುವುದು ಅಪರೂಪದ ಪ್ರಕರಣವಾಗಿದ್ದು, ಮುಧೋಳದಲ್ಲಿ ಯಶಸ್ವಿಯಾಗಿ ನಡೆದಿರುವುದು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ.

## ನೇಮಕಾತಿ ಪ್ರಕಟಣೆ

ಬೆಳಗಾವಿ ಡಿ.ಸಿ.ಸಿ. (DCC) ಬ್ಯಾಂಕ್ ನೇಮಕಾತಿ 2026: ಸೆಕೆಂಡ್ ಡಿವಿಷನ್ ಕ್ಲರ್ಕ್, ಗನ್–ಮ್ಯಾನ್ ಮತ್ತು ಪ್ಯೂನ್ ಹುದ್ದೆಗಳ ಒಟ್ಟು 104 ಖಾಲಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಲಿಮಿಟೆಡ್ (Belagavi DCCB), ಏಪ್ರಿಲ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ಜೂನಿಯರ್ ಅಸಿಸ್ಟೆಂಟ್ ಮತ್ತು ಚಾಲಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಳಗಾವಿ ಅಥವಾ ಕರ್ನಾಟಕ ಸರ್ಕಾರದಲ್ಲಿ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 27 ಆಗಸ್ಟ್ 2026 ರೊಳಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. *"ಆಯ್ಕೆ ಪ್ರಕ್ರಿಯೆ:* ಲಿಖಿತ ಪರೀಕ್ಷೆ, ಸಂದರ್ಶನ ಪರೀಕ್ಷೆಯ ಮಾದರಿ: FDA, SDA ಅಭ್ಯರ್ಥಿಗಳಿಗೆ ಪರೀಕ್ಷಾ ಮಾದರಿ.ಕೆಳಗೆ ತಿಳಿಸಿದಂತೆ ವಿಷಯವಾರು ಒಟ್ಟು 200 ಅಂಕಗಳು ಸಾಮಾನ್ಯ ಕನ್ನಡ: 50 ಅಂಕಗಳು ಸಾಮಾನ್ಯ ಇಂಗ್ಲಿಷ್: 25 ಅಂಕಗಳು ಸಾಮಾನ್ಯ ಜ್ಞಾನ: 25 ಅಂಕಗಳು ಸಹಕಾರ ವಿಷಯಕ್ಕೆ: 50 ಅಂಕಗಳು ಭಾರತ ಸಂವಿಧಾನ: 25 ಅಂಕಗಳು ಬ್ಯಾಂಕಿಂಗ್, ಸಮಾಜಯುಕ್ತವಾದ ಚಟುವಟಿಕೆ ಮತ್ತು ವಸ್ತುನಿಷ್ಠ ವಿಷಯ: 25 ಅಂಕಗಳು ಚಾಲಕ ಮತ್ತು ಸಹಾಯಕ ಅಭ್ಯರ್ಥಿಗಳಿಗೆ ಪರೀಕ್ಷಾ ಮಾದರಿ. ಒಟ್ಟು 100 ಅಂಕಗಳು ಸಾಮಾನ್ಯ ಕನ್ನಡ: 50 ಅಂಕಗಳು ಸಾಮಾನ್ಯ ಇಂಗ್ಲೀಷ್: 50 ಅಂಕಗಳು"ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 27 ಆಗಸ್ಟ್ 2026,ಅಧಿಕೃತ ವೆಬ್‌ಸೈಟ್: belagavidccb.bank.in

## ಶಾಲಾ ಮಕ್ಕಳಲ್ಲಿ ದೇಶಭಕ್ತಿ ಬೆಳೆಸಲು ಇಂತಹ ಕಾರ್ಯಕ್ರಮ ಅಗತ್ಯ: ಕೃಷ್ಣಮೂರ್ತಿ ಕಲ್ಲೂರು

o ನೈಜ್ಯ ದೆಸೆ ನ್ಯೂಸ್



ಮಾನ್ವಿ: ಶಾಲಾ–ಕಾಲೇಜು ವಿದ್ಯಾರ್ಥಿಗಳಲ್ಲಿ ದೇಶಭಕ್ತಿ, ರಾಷ್ಟ್ರಪ್ರೇಮ ಹಾಗೂ ಸೈನಿಕರ ತ್ಯಾಗದ ಬಗ್ಗೆ ಅರಿವು ಮೂಡಿಸಲು ಕಾರ್ಗಿಲ್ ವಿಜಯೋತ್ಸವದಂತಹ ಕಾರ್ಯಕ್ರಮಗಳನ್ನು ತಾಲೂಕು ಆಡಳಿತದ ವತಿಯಿಂದ ನಿಯಮಿತವಾಗಿ ಆಯೋಜಿಸುವ ಅಗತ್ಯವಿದೆ ಎಂದು ಕೇಂದ್ರೀಯ ಸಶಸ್ತ್ರ ಪಡೆಗಳ ಮಾಜಿ ಯೋಧರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾಧ್ಯಕ್ಷ ಕೃಷ್ಣಮೂರ್ತಿ ಕಲ್ಲೂರು ಹೇಳಿದರು.ತಾಲೂಕಿನ ನಿರೀಕ್ಷಣಾ ಮಂದಿರದ ಸಮೀಪದಲ್ಲಿರುವ ಕಾರ್ಗಿಲ್ ಹುತಾತ್ಮ ಅಂಗಡಿ ಮಂಜುನಾಥ ನಾಯಕ ಸಾದಾಪುರ ಅವರ ಕಂಚಿನ ಪುತ್ಥಳಿಗೆ ಪೂಜೆ ಸಲ್ಲಿಸಿ, ಪುಷ್ಪಮಾಲೆ ಅರ್ಪಿಸುವ ಮೂಲಕ ಆಯೋಜಿಸಿದ್ದ 27ನೇ ಕಾರ್ಗಿಲ್ ವಿಜಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.ದೇಶದ ಗಡಿಯಲ್ಲಿ ಸೈನಿಕರು ತಮ್ಮ ಕುಟುಂಬವನ್ನು ತೊರೆದು ಹಗಲು–ರಾತ್ರಿ ದೇಶದ ರಕ್ಷಣೆಯಲ್ಲಿ ತೊಡಗಿರುತ್ತಾರೆ. ಅವರ ತ್ಯಾಗ ಮತ್ತು ಬಲಿದಾನವನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಜವಾಬ್ದಾರಿ ಸಮಾಜದ ಮೇಲಿದೆ. ಆದ್ದರಿಂದ ಶಾಲಾ ಮಕ್ಕಳನ್ನು ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಮಾಡಿದರೆ ದೇಶಸೇವೆ, ಶಿಸ್ತು ಮತ್ತು ರಾಷ್ಟ್ರಭಕ್ತಿಯ ಮನೋಭಾವ ಬೆಳೆಯಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು.ಈ ಸಂದರ್ಭದಲ್ಲಿ ಖಾಸಗಿ ಉಪನ್ಯಾಸಕ ಆಂಜನೇಯ ನಸಲಾಪುರ, ಜಿಲ್ಲಾ ಹಾಗೂ ತಾಲೂಕು ಘಟಕದ ಪದಾಧಿಕಾರಿಗಳು, ಮಾಜಿ ಯೋಧರು, ಖಾಸಗಿ ಉಪನ್ಯಾಸಕರು ಹಾಗೂ ಗಣ್ಯರು ಉಪಸ್ಥಿತರಿದ್ದು, ಕಾರ್ಗಿಲ್ ವಿಜಯೋತ್ಸವ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ಅರಕೇರಾ ಭಕ್ತಾಧಿಗಳಿಂದ ಜ್ಯೋತಿರ್ಲಿಂಗಗಳ ಪ್ರವಾಸ*



o ನೈಜ್ಯ ದೆಸೆ ನ್ಯೂಸ್

ಅರಕೇರಾ : ಪಟ್ಟಣದ ಭಕ್ತಾಧಿಗಳಿಂದ ಜ್ಯೋತಿರ್ಲಿಂಗಗಳ ಪ್ರವಾಸ ಕಾರ್ಯಕ್ರಮವನ್ನು ಮೃತ್ಯುಂಜಯ್ಯಸ್ವಾಮಿ ಹಿರೇಮಠ ಹಮ್ಮಿಕೊಂಡಿದ್ದಾರೆ.ಅರಕೇರಾ ಭಕ್ತಾಧಿಗಳು ಮಹಾರಾಷ್ಟ್ರ,ಗುಜರಾತ್ ಗಳಲ್ಲಿರುವ ಜ್ಯೋತಿರ್ಲಿಂಗಗಳ ದರ್ಶನಕ್ಕಾಗಿ ಪ್ರವಾಸ ಹೊರಟರು. ಶನಿ ಶಿಂಗ್ಣಾಪುರ7 ಜ್ಯೋತಿರ್ಲಿಂಗಗಳು ಶಿರಡಿಸಾಯಿಬಾಬ ದರ್ಶನ, ಗುಜರಾತ್ ಸೋಮನಾಥ,ಮಹಾಕಾಳೇಶ್ವರ ಉಜ್ಜಿಯಾನಿ, ತ್ರಯಂಬಕೇಶ್ವರ ನಾಸಿಕ್,ನಾಗೇಶ್ವರ ಗೋಮಲೆ ದ್ವಾರ ಗುಜರಾತ ಭೀಮಶಂಕರ್ ಪುಣೆ,ಘೃಷ್ಣೇಶವರ ಎಲ್ಲೋರ ಗುಹೆಗಳು,ಸರ್ದಾರವಲ್ಲಭ ಭಾಯ್ ಪಟೇಲ್ ರವರ ಪ್ರತಿಮೆ,ಮಹಾತ್ಮಾ ಗಾಂಧಿಯವರ ಜನ್ಮ ಸ್ಥಳ ಮನೆ ಇತರ ಸ್ಥಳಗಳನ್ನು ನೋಡಲು ಖಾಸಗಿ ಬಸ್ಸಿನಲ್ಲಿ ಪ್ರವಾಸ ಕೈಗೊಂಡರು ಗಂಡು ಮಕ್ಕಳು ,ಹೆಣ್ಣುಮಕ್ಕಳು ಸೇ–ರಿದಂತೆ ಸುಮಾರು 50ಕ್ಕೂಹೆಚ್ಚು ಭಕ್ತಾಧಿಗಳು ಪ್ರವಾಸಕ್ಕೆ ತರಳುವಸಂದರ್ಭದಲ್ಲಿ ಶ್ರೀಸೂಗೂರೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದರು,ಪ್ರವಾಸಕ್ಕೆ ಹೋಗುವ ಭಕ್ತಾಧಿಗಳಿಗೆ ಗ್ರಾಮಸ್ಥರುಬೀಳ್ಕೊಟ್ಟರು,ಸಂದರ್ಭದಲ್ಲಿರಾಚಯ್ಯಸ್ವಾಮಿಮಠಪತಿ,ಗಂಗಯ್ಯಸ್ವಾಮಿ,ಶರಣಯ್ಯಸ್ವಾಮಿ.ಸಿದ್ದಯ್ಯಸ್ವಾಮಿಮಠಪತಿ,ವ ಹೇಶಸ್ವಾಮಿ ಮಠಪತಿ,ಸಿದ್ದಪ್ಪ ಮಾದ್ವರ, ಬಸವರಾಜಪ್ಪಗುಡಿ, ವಿರೇಶಸ್ವಾಹುಕಾರ ಕುರುಕುಂದಿ,ಸೋಮಶೇಖರಪತ್ತಾರ.ನಾಗಪ್ಪ ಕುರುಕುಂದಿ.ಶರಭಣ್ಣ ಕುಂಬಾರ,ಸುಧಾಕಾರ ವಿಬೂತಿ,ದೇವರಾಜ ಕುರುಕುಂದಿ, ಜಗದೀಶನಾಗೋಲಿ ಹನುಮಂತ್ರಾಯ ಭಕ್ತ, ಸಂತೋಷಮಾದ್ವರ, ನಾಗರಾಜಕುರುಕುಂದಿ, ರೈಮನಸಾಬ ಜಾನಿ,ಕಾಸಿಂಟೈಲರ್,ಕರಿಯಪ್ಪ ಮುಂತಾದವರು ಉಪಸ್ಥಿತರಿದ್ದರು.

# ಕಾಂಗ್ರೆಸ್ ಬಲಿಷ್ಠಗೊಳಿಸಲು ಸಂಘಟನಾ ಸೃಜನ ಅಭಿಯಾನ

o ನೈಜ್ಯ ದೆಸೆ ನ್ಯೂಸ್



ಬಳ್ಳಾರಿ / ಕಂಪ್ಲಿ : ಬಳ್ಳಾರಿ ಜಿಲ್ಲಾ ಗ್ರಾಮೀಣ 'ಕಾಂಗ್ರೆಸ್' ಅಧ್ಯಕ್ಷರ ಆಯ್ಕೆಗೆ ಸಂಬಂಧಿಸಿದಂತೆ ಜುಲೈ 26ರಿಂದ 31ರವರೆಗೆ ಜಿಲ್ಲೆಯ ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಿ ವ್ಯಾಪಕ ಪ್ರವಾಸ ಕೈಗೊಂಡು, ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ಸಮಾಲೋಚನೆ ನಡೆಸಿ ಅಭಿಪ್ರಾಯ ಸಂಗ್ರಹಿಸಲಾಗುವುದು' ಎಂದು ಎಐಸಿಸಿ ಜಿಲ್ಲಾ ವೀಕ್ಷಕ ಅರುಣ್ ಯಾದವ್ ( ಮಾಜಿ ಅಧ್ಯಕ್ಷರು, ಮಧ್ಯಪ್ರದೇಶ ಕಾಂಗ್ರೆಸ್ ಸಮಿತಿ ಹಾಗೂ ಮಾಜಿ ಕೇಂದ್ರ ಮಂತ್ರಿಗಳು) ತಿಳಿಸಿದರು.ಪಟ್ಟಣದ ಶಾಸಕರ ಕಾಂಗ್ರೆಸ್ ಕಚೇ–ರಿಯಲ್ಲಿ ಭಾನುವಾರ ಕಾರ್ಯಕರ್ತರ ಸಭೆ ಹಾಗೂ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಂಘಟನಾ ಸೃಜನ ಅಭಿಯಾನದಡಿ ಅಹಮದಾಬಾದ್ ಸಭೆಯ ತೀರ್ಮಾನದಂತೆ ಪಕ್ಷವನ್ನು ತಳಮಟ್ಟದಿಂದ ಬಲಿಷ್ಠಗೊಳಿಸಲು ಹಾಗೂ ಕಾರ್ಯಕರ್ತರ ಆಧಾರಿತ ಪಕ್ಷವನ್ನಾಗಿ ರೂಪಿಸಲು ವಿಕೇಂದ್ರೀಕರಣಕ್ಕೆ ಆದ–ೄತೆ ನೀಡಲಾಗುತ್ತಿದೆ' ಎಂದರು.ಜಿಲ್ಲಾ, ಬ್ಲಾಕ್, ಮಟ್ಟದ ಸಭೆ ನಡೆಸಿ ಅಭಿಪ್ರಾಯ ಸಂಗ್ರಹ ಜರುಗಲಿದೆ. 'ಪಕ್ಷಕ್ಕಾಗಿ ಶ್ರಮಿಸುವ ಹಾಗೂ ಪ್ರಾಮಾಣಿಕ ಕಾರ್ಯಕರ್ತರಿಗೆ ಸೂಕ್ತ ಅವಕಾಶ ಕಲ್ಪಿಸಲಾಗುವುದು' ಎಂದು ತಿಳಿಸಿದ ವೀಕ್ಷಕರು, 'ಹಿರಿಯ ನಾಯಕರಿಂದ ಬೂತ್ ಮಟ್ಟದ ಕಾರ್ಯಕರ್ತರವರೆಗೆ ಹಾಗೂ ಜನಸಾಮಾನ್ಯರನ್ನು ಭೇಟಿ ಮಾಡಲಾಗುವುದು' ಎಂದರು.ಕಾಂಗ್ರೆಸ್ ಜಿಲ್ಲಾ ಘಟಕದ ಸಾಮಾಜಿಕ ಜಾಲತಾಣದ ಅಧ್ಯಕ್ಷ ಎನ್. ಹಬೀಬಿ ರೆಹಮಾನ್ ಮಾತನಾಡಿ 'ಜಿಲ್ಲೆಯಲ್ಲಿ ಕಾಂಗ್ರೆಸ್ ಶಾಸಕರು ಗೆಲ್ಲುವಂತೆ ಕಾರ್ಯಕರ್ತರು ಮಾಡಿದ್ದೇವೆ ಹಾಗೂ ಹಲವರು ಕಾಂಗ್ರೆಸ್‌ನತ್ತ ಒಲವು ತೋರುತ್ತಿದ್ದಾರೆ . ಈ ಮಟ್ಟಿಗೆ ಪಕ್ಷ ಬಲಿಷ್ಠವಾಗಿರುವಾಗ, ಸಂಘಟನ ಕಾರ್ಯಕರ್ತರಿಗೆ ಜಿಲ್ಲಾ ಗ್ರಾಮೀಣ ಘಟಕದ ಅಧ್ಯಕ್ಷರನ್ನು ಆಯ್ಕೆ ಮಾಡುವುದು ಸೂಕ್ತ ಎಂಬುದು ನನ್ನ ಅಭಿಪ್ರಾಯ ಎಂದು ತಿಳಿಸಿದರು. ಬಳ್ಳಾರಿ ಜಿಲ್ಲಾ ಗ್ರಾಮೀಣ 'ಕಾಂಗ್ರೆಸ್' ಅಧ್ಯಕ್ಷರ ಆಯ್ಕೆಗೆ ಸುಮಾರು 40 ಅರ್ಜಿಗಳು ಸಲ್ಲಿಕೆಯಾಗಿವೆ ಎಂದು ತಿಳಿದುಬಂದಿದೆ. ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸೈಯದ್ ಅಲಿ ಮೆಹಬಂದರ್, ಬಳ್ಳಾರಿ ಜಿಲ್ಲಾ ಗ್ರಾಮೀಣ ಕಾಂಗ್ರೆಸ್ ಅಧ್ಯಕ್ಷ ಶಿವಯೋಗಿ, ಕೊಪ್ಪಳ ಕೆಪಿಸಿಸಿ ಪದಾಧಿಕಾರಿ ಕಿಶೋರಿ ಬಂಡೂರು, ಕಂಪ್ಲಿ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಕೆ. ಶ್ರೀನಿವಾಸ್ ರಾವ್, ಕುರುಗೋಡು, ಕೋಳೂರು ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಚಾನಳ್ ಬಸವರಾಜ್ ಗೌಡ್ರು, ಜಿಲ್ಲಾ ಕಾಂಗ್ರೆಸ್ ಪದಾಧಿಕಾರಿಗಳು, ಸೇರಿದಂತೆ ವಿವಿಧ ಘಟಕದ ಅಧ್ಯಕ್ಷರು, ಪದಾಧಿಕಾರಿಗಳು, ಮಾಜಿ ಅಧ್ಯಕ್ಷರುಗಳು, ಮುಖಂಡರು, ಕಾರ್ಯಕರ್ತರು ಉಪಸ್ಥಿತ–ರಿದ್ದರು.ವರದಿ : ಜಿಲಾನಸಾಬ್ ಬಡಿಗೇರ್

# ಯುವ ಪತ್ರಕರ್ತ ಸುರೇಶಗೌಡ ಕಕ್ಕಲದೊಡ್ಡಿಯವರಿಗೆ ಜಿಲ್ಲಾ ಮಟ್ಟದ ವಾರ್ಷಿಕ ಪ್ರಶಸ್ತಿಗೆ ಆಯ್ಕೆ

o ನೈಜ್ಯ ದೆಸೆ ನ್ಯೂಸ್

ಅರಕೇರಾ :ದೇವದುರ್ಗ ತಾಲೂಕಿನ ಪ್ರತಿ–ಕೋಧ್ಯಮದಲ್ಲಿ ತನ್ನದೇ ಆದ ವಿಶಿಷ್ಟ್ ಬರವಣಿಗೆ ಮೂಲಕ ರೈತರ ಸಮಸ್ಯೆ ವಿದ್ಯಾರ್ಥಿಗಳಿಗೆ ಮೂಲಸೌಕರ್ಯಗಳ ವರದಿ ಮೂಲಕ ಜನಪರ ಸಮಾಜಿಕ ಕಳಕಳಿಯ ಸುದ್ದಿಗಳನ್ನು ಪತ್ರಿಕೆಯಲ್ಲಿ ವರದಿಮಾಡುವ ಮೂಲಕ ಸುರೇಶಗೌಡಕಕ್ಕಲದೊಡ್ಡಿಯವರುತಮ್ಮನಿಸ್ವಾರ್ಥವರದಿಗಾ–ರಿಕೆಯಮೂಲಕಜನಸಾಮಾನ್ಯರಲ್ಲಿಚಿರಪ–ರಿಚಿತರಾಗಿದ್ದಾರೆ.ಇವರು ಕಕ್ಕಲದೊಡ್ಡಿ ಗ್ರಾಮದವರಾಗಿದ್ದಾರೆ ವಿಜಯ ಕರ್ನಾಟಕ ಕನ್ನಡ ದಿನ ಪತ್ರಿಕೆಯ ದೇವದುರ್ಗ ತಾಲೂಕು ವರದಿಗಾರರಾಗಿ ಸುಮಾರು 8ವರ್ಷಗಳ ಕಾಲ ಪತ್ರಿಕೋದ್ಯಮದಲ್ಲಿ ಸೇವೆಮಾಡುತ್ತಿದ್ದು. ಇವ–ರಿಗೆ "ನರಸಿಂಹಚಾರ್ಯ ಗುಡಿ" ಸ್ಮರಣಾರ್ಥ ಪ್ರಶಸ್ತಿಗೆ ದೇವದುರ್ಗ ವಿಜಯ ಕರ್ನಾಟಕ ಪತ್ತಿಕೆ



ವರದಿಗಾರ ಸುರೇಶಗೌಡ ಕಕ್ಕಲದೊಡ್ಡಿ ಇವರು ಆಯ್ಕೆಯಾಗಿದ್ದಾರೆ. ವಿಶೇಷ ವರದಿಗಳು: ಸಮಸ್ಯೆ ಕುರಿತು ಏಕ ಸರಣಿ ,ಹಾಗೂ ರೈತರ ಸಮಸ್ಯೆ ವರದಿ, ವಿದ್ಯಾರ್ಥಿಗಳ ಮೂಲಸೌಕರ್ಯಗಳ ವರದಿ ,ಸೇರಿದಂತೆ ಗ್ರಾಮೀಣಾ ಪ್ರದೇಶದ ಜನರ ಸಮಸ್ಯೆಗಳು ಗ್ರಾಮೀಣಾ ಜನರ ನೋವು ನಲಿವುಗಳಿಗೆ ಧ್ವನಿಯಾಗಿ ನಿಲ್ಲುವ ಸುರೇಶಗೌಡರು,ರೈತರ ಸಮಸ್ಯೆಗಳು ಸ್ಥಳೀಯ ಸಮಸ್ಯೆಗಳ ವಾಸ್ತವ್ಯಗಳನ್ನು ಅರಿತುಕೊಂಡು ತಮ್ಮ ಪತ್ರಿಕೆಯಲ್ಲಿ ಸುದ್ದಿ ಪ್ರಕಟಿಸುವ ಮೂಲಕ ಅಭಿವೃದ್ದಿಗೆ ಬೆಳಕು ಚಲ್ಲಿದ್ದಾರೆ. ಅವರ ವೃತ್ತಿ ಜೀವನವು ಕೇವಲ ಸುದ್ದಿಗಳನ್ನು ಬೆನ್ನಟ್ಟದೆ ಅದರ ಹಿಂದನ ಮಾನವೀಯ ಮೌಲ್ಯಗಳನ್ನು ಅರ್ಥಮಾಡಿಕೊಂಡು ವರದಿ ಮಾಡುವ ಅವರ ಶೈಲಿಯಾಗಿದೆ ಹಲವು ಸಮಸ್ಯೆಗಳಿಗೆ ಬೆಳಕು ಚಲ್ಲಿದ್ದಾರೆ.ಅವರ ಸಮಾಜಮುಖಿ ಕಾರ್ಯಗಳು ಯಶಸ್ವಿಯಾಗಲಿ ಮತ್ತು ಅವರ ಲೇಖನಿ ಸದಾ ಸತ್ಯದ ಪರವಾಗಿ ದನಿ ಎತ್ತಲಿ ಎಂದು ಈ ಸಂದರ್ಭದಲ್ಲಿ ಅವರಿಗೆ ದೇವದುರ್ಗ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದಿಂದ 2024 ನೇಸಾಲಿನಲ್ಲಿ "ದುರ್ಗದ ಸಿರಿ" ಪ್ರಶಸ್ತಿ ದೊರೆತಿ–ದೆ.ನರಸಿಂಹಚಾರ್ಯ ಗುಡಿ ಸ್ಮರಣಾರ್ಥ ಪ್ರಶಸ್ತಿಗೆ ದೇವದುರ್ಗ ವಿಜಯ ಕರ್ನಾಟಕ ಪತ್ತಿಕೆ ವರದಿಗಾರ ಸುರೇಶಗೌಡ ಕಕ್ಕಲದೊಡ್ಡಿಯವರು ಆಯ್ಕೆಯಾಗಿದ್ದಾರೆ. ಇವರಿಗೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಜಿಲ್ಲಾ ಘಟಕ ಹಾಗೂ ರಾಯಚೂರು ರಿಪೊಟರ್ಸ್ ಗಿಲ್ಡ್ ವತಿಯಿಂದ 28ರಂದು ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಧಿರದಲ್ಲಿ ನಡೆಯುವ ಜಿಲ್ಲಾ ಮಟ್ಟದ ಪ್ರತಿಕಾ ದಿನಾಚರಣೆ ಹಾಗೂ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಲಿದ್ದಾರೆ,ಇವರ ಪರಿಶ್ರಮ ಸಿಕ್ಕ ಈ ಪ್ರಶಸ್ತಿಯು ಇವರ ಮುಂದಿನ ಪ್ರತಿಕೋದ್ಯಮಕ್ಕೆ ಮತ್ತಷ್ಟು ಸ್ಫೂರ್ತಿನಿಡಲಿ ಎಂದು ಸಾರ್ವಜನಿಕರು ಮತ್ತು ಮಾಧ್ಯಮ ಮಿತ್ರರರ ಹಾರೈಸಿದ್ದಾರೆ.

# ಪತ್ರಕರ್ತ ಮೌನೇಶ ಜಾಲಹಳ್ಳಿಗೆ 'ದುರ್ಗದ ಸಿರಿ' ಪ್ರಶಸ್ತಿ: ಜಾಲಹಳ್ಳಿಯಲ್ಲಿ ಅದ್ದೂರಿ ಸನ್ಮಾನ

o ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ, ಜು.26: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ದೇವದುರ್ಗ ತಾಲೂಕು ಘಟಕದ ವತಿಯಿಂದ ಆಯೋಜಿಸಲಾಗಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ 2026ನೇ ಸಾಲಿನ ಎ. ವೆಂಕಟೇಶ ನಾಯಕ ಸ್ಮರಣಾರ್ಥ ನೀಡಲಾಗುವ ತಾಲೂಕು ಮಟ್ಟದ ಗೌರವಾನ್ವಿತ 'ದುರ್ಗದ ಸಿರಿ' ಪ್ರಶಸ್ತಿಗೆ ಭಾಜನರಾದ ಪತ್ರಕರ್ತ ಮೌನೇಶ ಜಾಲಹಳ್ಳಿ ಅವರನ್ನು ಜಾಲಹಳ್ಳಿ ಪ್ರವಾಸಿ ಮಂದಿರದಲ್ಲಿ ಅದ್ದೂರಿಯಾಗಿ ಸನ್ಮಾನಿಸಲಾಯಿತು.ಜಾಲಹಳ್ಳಿ ಹೋಬಳಿ ಘಟಕದ ಕರವೇ ಅಧ್ಯಕ್ಷ ತಮ್ಮಣ್ಣ ಹೇರುಂಡಿ, ಅವರ ಗೆಳೆಯರ ಬಳಗ ಹಾಗೂ ವಿವಿಧ ಸಂಘಟನೆಗಳು ಮತ್ತು ರಾಜಕೀಯ ಪಕ್ಷಗಳ ಮುಖಂಡರ ಸಮ್ಮುಖದಲ್ಲಿ ಸನ್ಮಾನ ಸಮಾರಂಭ ನಡೆಯಿತು.ಈ




ಸಂದರ್ಭದಲ್ಲಿ ಮಾತನಾಡಿದ ತಮ್ಮಣ್ಣ ಹೇರುಂಡಿ, "ಸಮಾಜದ ಕಣ್ಣು ಮತ್ತು ಕಿವಿಯಾಗಿ ಪತ್ರಕರ್ತರು ಕಾರ್ಯನಿರ್ವಹಿಸುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳ ಜನರ ಸಮಸ್ಯೆಗಳು, ಅಭಿವೃದ್ಧಿ ಬೇಡಿಕೆಗಳು ಹಾಗೂ ಸಾರ್ವಜನಿಕ ಹಿತಾಸಕ್ತಿಯ ವಿಷಯಗಳನ್ನು ಆಡಳಿತದ ಗಮನಕ್ಕೆ ತರುವಲ್ಲಿ ಪತ್ರಕರ್ತರ ಪಾತ್ರ ಮಹತ್ವದ್ದಾಗಿದೆ," ಎಂದರು.ಶಾಂತಪ್ಪ ಬಳೆ ಮಾತನಾಡಿ, "ಪತ್ರಕರ್ತರು ಸತ್ಯನಿಷ್ಠೆ, ವಸ್ತುನಿಷ್ಠತೆ ಹಾಗೂ ಸಾಮಾಜಿ–ಕ ಹೊಣೆಗಾರಿಕೆಯಿಂದ ವರದಿ ಮಾಡಬೇಕು. ಸಾರ್ವಜನಿಕರ ವಿಶ್ವಾಸವನ್ನು ಉಳಿಸಿಕೊಳ್ಳುವುದು ಪತ್ರಿಕೋದ್ಯಮದ ಪ್ರಮುಖ ಜವಾಬ್ದಾರಿಯಾಗಿದೆ," ಎಂದು ಹೇಳಿದರು.ಸನ್ಮಾನ ಸಮಾರಂಭದಲ್ಲಿ ಅಪ್ಪು ಪಾಟೀಲ್ ಮುದುಗೋಟ್ (ಜೆಡಿಎಸ್ ಮುಖಂಡರು), ದುರ್ಗಪ್ಪ ನಾಯಕ್ ಬಳೆ (ಬಿಜೆಪಿ ಮುಖಂಡರು), ಬಾಳಪ್ಪ, ಭೀಮಣ್ಣ ಅಂಜಳ (ದಲಿತ ಮುಖಂಡರು), ಮಲ್ಲಿಕಾರ್ಜುನ ಹಡಪದ, ಬಸವರಾಜ್ ಹೇರುಂಡಿ, ಭೀಮಣ್ಣ, ನಿಂಗಣ್ಣ ಬಡಿಗೇರ್ ಸೇರಿದಂತೆ ವಿವಿಧ ಸಂಘಟನೆಗಳು ಹಾಗೂ ರಾಜಕೀಯ ಪಕ್ಷಗಳ ಮುಖಂಡರು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು. ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

# ನೇಕಾರ ಸಮುದಾಯದ ಸದಸ್ಯತ್ವ ಅಭಿಯಾನಕ್ಕೆ ಚಾಲನೆ

o ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ನೇಕಾರ ಸಮುದಾಯ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಮತ್ತು ರಾಜಕೀಯವಾಗಿ ಹಿಂದುಳಿದಿದ್ದು, ಸರ್ಕಾರ ಸಮುದಾಯಕ್ಕೆ ವಿಶೇಷ ಸ್ಥಾನಮಾನ ನೀಡವುದರ ಜೊತೆಗೆ ಸೌಲಭ್ಯ ಒದಗಿಸಲು ಮುಂದಾಗಬೇಕು ಎಂದು ಬಳ್ಳಾರಿ ಜಿಲ್ಲಾ ನೇಕಾರ ಒಕ್ಕೂಟದ ಜಿಲ್ಲಾಧ್ಯಕ್ಷ ಸಿ.ದೇವಾನಂದ ಹೇಳಿದರು. ಅವರು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಭಾನುವಾರ ನೇಕಾರ ಸಮುದಾಯ ಒಕ್ಕೂಟದ ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ನೇಕಾರ ಸಮುದಾಯದ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿ, ರಾಜ್ಯದಲ್ಲಿ ಸುಮಾರು 50 ರಿಂದ 60 ಲಕ್ಷ ಜನಸಂಖ್ಯೆಯಿದೆ. ಜಿಲ್ಲೆಯ ತಾಲೂಕುಗಳಾದ ಕಂಪ್ಲಿ, ಸಂಡೂರು, ಕುರುಗೋಡು ಮತ್ತು ಸಿರುಗುಪ್ಪದಲ್ಲಿ ಪದಾಧಿಕಾ–



ರಿಗಳನ್ನು ಆಯ್ಕೆ ಮಾಡಲು ನಿರ್ಧರಿಸಲಾಗಿದೆ. ನಮ್ಮ ಸಮುದಾಯ ನೇಕಾರ, ದೇವಾಂಗ, ಪದ್ಮಸಾಲಿ, ತೋಗಟವೀರ, ಕುರುಹಿನಶೆಟ್ಟಿ ಸೇರಿದಂತೆ 40ಕ್ಕೂ ಹೆಚ್ಚಿನ ಉಪಪಂಗಡಗಳನ್ನು ಒಳಗೊಂಡಿದೆ. ಸಮುದಾಯಕ್ಕೆ ಸರ್ಕಾರದಿಂದ ಸೌಲಭ್ಯಗಳು ಮರಿಚಿಕೆಯಾಗಿವೆ. ಅದಕ್ಕೆ ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಸಮುದಾಯದ ಸದಸ್ಯತ್ವ ಅಭಿಯಾನ ಮಾಡುತ್ತಿದ್ದವೆ. ಮೊದಲಿಗೆ ಸಮುದಾಯದಲ್ಲಿ ಒಗ್ಗೂಡಿಸಿ ಪ್ರದರ್ಶನದ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಪರಿಶೀಲನೆ ನಡೆಸಲಾಗುತ್ತಿದ್ದು, ಮುಂದಿನ ದಿನದಲ್ಲಿ ಒಗ್ಗಟ್ಟು, ಸಂಘಟನೆ ಮಾಡಬೇಕು ಎಂದರು.ಈ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲಾ ನೇಕಾರ ಒಕ್ಕೂಟದ ಮಹಿಳಾ ಅಧ್ಯಕ್ಷೆ ಸಂಯುಕ್ತ ಮಿಟ್ಟೆ, ಬಳ್ಳಾರಿ ಜಿಲ್ಲಾ ನೇಕಾರ ಮಹಿಳಾ ಒಕ್ಕೂಟದ ಅಧ್ಯಕ್ಷೆ ಮಿಟ್ಟೆ ಸಂಯುಕ್ತ ಮೂರ್ತಿ, ಬಳ್ಳಾರಿ ತಾಲೂಕು ನೇಕಾರ ಮಹಿಳಾ ಒಕ್ಕೂಟದ ಅಧ್ಯಕ್ಷೆ ಉಮಾ ರಾಜು ಮಿಟ್ಟೆ,, ಕುರುಹಿನಾ ಕೇಂದ್ರ ಸಂಘದ ನಿರ್ದೇಶಕ ಸುರೇಶ ಜುಟ್ಲ್, ಮುಖಂಡರಾದ ರಾಜು ಮಿಟ್ಟೆ, ನೇಕಾರ ಸಮುದಾಯ ತಾಲೂಕು ಅಧ್ಯಕ್ಷ ಪಿ.ಬ್ರಹ್ಮಯ್ಯ, ಕಾರ್ಯದರ್ಶಿ ಜಿ.ಸುಧಕರ ಸೇರಿ ಅನೇಕರಿದ್ದರು. ವರದಿ : ಜಿಲಾನಸಾಬ್ ಬಡಿಗೇರ್

# ಖಾಸ್ಗತೇಶ್ವರ ಜಾತ್ರೆ: ಗೋಪಾಲಕಾವಲಿ ಕಾರ್ಯಕ್ರಮ

o ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಪಟ್ಟಣದ ಐತಿಹಾಸಿಕ ಶ್ರೀ ಖಾಸ್ಗತ ಮಹಾಶಿವಯೋಗಿಗಳ ಜಾತ್ರೋತ್ಸವದ ಪ್ರಯುಕ್ತ ಭಾನುವಾರ ಬೆಳಗಿನ ಜಾವ 5.45ಕ್ಕೆ ಅಪಾರ ಭಕ್ತರ ಸಮ್ಮುಖದಲ್ಲಿ ಗೋಪಾಲಕಾವಲಿ (ಮೊಸರು ಗಡಿಗೆ) ಒಡೆಯುವ ವಿಶೇಷ ಕಾರ್ಯಕ್ರಮ ಶ್ರದ್ಧಾ ಭಕ್ತಿಯಿಂದ ಜರುಗಿ–ತು. ಇದರೊಂದಿಗೆ ಕಳೆದ ಒಂದು ವಾರದಿಂದ ನಡೆಯುತ್ತಿದ್ದ "ಓಂ ನಮಃ ಶಿವಾಯ" ಉದ್ಘೋಷದ ಭಜನಾ ಕಾರ್ಯಕ್ರಮ ಮಂಗಲವಾಯಿತು. ಮೊಸರು ಗಡಿಗೆ ಒಡೆಯುವ ಕಾರ್ಯಕ್ರಮ ಮುನ್ನ ಶ್ರೀ ಖಾಸ್ಗತೇಶ್ವರ ಮಠದ ಪರಮಪೂಜ್ಯ ಸಿದ್ದಲಿಂಗ ದೇವರ ಸಾನಿಧ್ಯದಲ್ಲಿ ವಿವಿಧ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇ–ರಿಸಲಾಯಿತು. ಗೋಪಾಲ ಕಾವಲಿ ಐತಿಹಾಸಿಕ ಹಿನ್ನೆಲೆ: ಲಿಂಗೈಕ್ಯ ಶ್ರೀ ಖಾಸ್ಗತ ಶಿವಯೋಗಿಗಳು ಪಂಡರಾಪುರದ ವಿಠ್ಠಲ ಜಾತ್ರೋತ್ಸವಕ್ಕೆ ಹೋದ ಸಂದರ್ಭದಲ್ಲಿ ಆಶಾಡ ಏಕಾದಶಿ ದಿನದಂದು ವಿಠ್ಠಲ ದೇವಸ್ಥಾನದಲ್ಲಿ ಗೋಪಾಲಕಾವಲಿ ಕಾರ್ಯಕ್ರಮ ನೆರವೇರಿಸಲಾಗಿ–ತ್ತು. ಈ ಕಾರ್ಯಕ್ರಮವನ್ನು ನಮ್ಮ ಮಠದಲ್ಲಿಯೂ ನಡೆಸಿದರೆ ಭಕ್ತರಿಗೆ ಇನ್ನೂ ಅನುಕೂಲವಾಗಿ ಅವರು ಬದುಕು ಹಸನಾಗುತ್ತದೆ ಎಂದು ಖಾಸ್ಗತರು ಶ್ರೀ ಮಠದ ಜಾತ್ರೆ ಸಂದರ್ಭದಲ್ಲಿ ಗೋಪಾಲಕಾವಲಿ ಕಾರ್ಯಕ್ರಮ ಹಮ್ಮಿಕೊಂಡಿದ್ದರು ಎಂದು ಹೇಳಲಾಗುತ್ತದೆ. ಅದರಂತೆ ಈ ಸಂಪ್ರದಾಯವನ್ನು ಜಾತ್ರೆಯ ಸಂದರ್ಭದಲ್ಲಿ



ಮುಂದುವರಿಸಿಕೊಂಡು ಬರಲಾಗುತ್ತಿದೆ. ಹರಿದು ಬಂದ ಭಕ್ತ ಸಾಗರ: ಈ ಬಾರಿಯೂ ಭಾನುವಾರ ಬೆಳಗಿನ ಜಾವ ನಡೆದ ಐತಿಹಾಸಿಕ ಗೋಪಾಲ ಕಾವಲಿ (ಮೊಸರು ಗಡಿಗೆ) ಒಡೆಯುವ ಕಾರ್ಯಕ್ರಮದಲ್ಲಿ ರಾಜ್ಯ ಹಾಗೂ ಬೇರೆ ರಾಜ್ಯಗಳಲ್ಲಿರುವ ಶ್ರೀಮಠದ ಅಪಾರಭಕ್ತರು ಭಾಗವಹಿಸಿ ಮೊಸರು ಗಡಗಿಯ ಪ್ರಸಾದವನ್ನು ಪಡೆದು ಪುನೀತರಾದರು. ಕಾರ್ಯಕ್ರಮದಲ್ಲಿ ಶ್ರೀ ಮಠದ ಶ್ರೀ ಸಿದ್ದಲಿಂಗ ದೇವರು ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಮಠದ ಉಸ್ತುವಾರಿ ವೇ.ಮೂ. ಮುರುಗೇಶ ವಿರಕ್ತ ಮಠ ಇದ್ದರು.



## ಶಿಕ್ಷಣ ಮಾರ್ಗದರ್ಶಿ ವಿಶೇಷ

### B.Sc. OT

B.Sc. Operation Theatre Technology (B.Sc. OT) ಎಂಬುದು ಶಸ್ತ್ರಚಿಕಿತ್ಸೆ (Surgery) ಸಮಯದಲ್ಲಿ ವೈದ್ಯರಿಗೆ ಮತ್ತು ಶಸ್ತ್ರಚಿಕಿತ್ಸಾ ತಂಡಕ್ಕೆ ತಾಂತ್ರಿಕ ಸಹಾಯ ನೀಡುವ ಆರೋಗ್ಯ ವಿಜ್ಞಾನ ಪದವಿ ಕೋರ್ಸ್ ಆಗಿದೆ.ಕೋರ್ಸ್ ಅವಧಿ 4 ವರ್ಷ 3 ವರ್ಷಗಳ ಶೈಕ್ಷಣಿಕ ಅಧ್ಯಯನ 1 ವರ್ಷದ ಕಡ್ಡಾಯ ಇಂಟರ್ನ್‌ಶಿಪ್ (ಸಂಸ್ಥೆ/ವಿಶ್ವವಿದ್ಯಾಲಯದ ನಿಯಮದಂತೆ ಬದಲಾಗಬಹುದು) ಅರ್ಹತೆ ಕಗಅ/12ನೇ ತರಗತಿಯಲ್ಲಿ Physics, Chemistry, Biology (PCB) ವಿಷಯಗಳೊಂದಿಗೆ ಉತ್ತೀರ್ಣರಾಗಿರಬೇಕು. ಕೆಲವು ಕಾಲೇಜುಗಳಲ್ಲಿ ಕನಿಷ್ಠ 45–50% ಅಂಕಗಳು ಅಗತ್ಯವಾಗಿರಬಹುದು. ಕೋರ್ಸ್‌ನಲ್ಲಿ ಕಲಿಯುವ ವಿಷಯಗಳು

ಮಾನವ ದೇಹ ರಚನೆ (Anatomy)
ದೇಹ ಕ್ರಿಯಾಶಾಸ್ತ್ರ (Physiology)
ಶಸ್ತ್ರಚಿಕಿತ್ಸಾ ತಂತ್ರಜ್ಞಾನ
ಔಖ ಉಪಕರಣಗಳ ಬಳಕೆ
ಸೋಂಕು ನಿಯಂತ್ರಣ (Infection Control)
ತುರ್ತು ಚಿಕಿತ್ಸಾ ನಿರ್ವಹಣೆ
ಅನಸ್ಥೀಷಿಯಾ (Anaesthesia) ಮೂಲಭೂತ ಜ್ಞಾನ
ರೋಗಿಗಳ ಆರೈಕೆ

ಉದ್ಯೋಗಾವಕಾಶಗಳು
Operation Theatre Technologist
OT Technician
Surgical Assistant
Anaesthesia Technician
Hospital OT Coordinator

ಉದ್ಯೋಗ ಕ್ಷೇತ್ರಗಳು
ಸರ್ಕಾರಿ ಆಸ್ಪತ್ರೆಗಳು
ಖಾಸಗಿ ಆಸ್ಪತ್ರೆಗಳು
ಮಲ್ಟಿ-ಸ್ಪೆಷಾಲಿಟಿ ಆಸ್ಪತ್ರೆಗಳು
ಟ್ರಾಮಾ ಸೆಂಟರ್‌ಗಳು
ವೈದ್ಯಕೀಯ ಕಾಲೇಜುಗಳು
ಡೇ-ಕೇರ್ ಸರ್ಜರಿ ಕೇಂದ್ರಗಳು

ಆರಂಭಿಕ ಸಂಬಳ ₹20,000–₹35,000 ಪ್ರತಿ ತಿಂಗಳು (ಅನುಭವ ಮತ್ತು ಸಂಸ್ಥೆಯನ್ನು ಅವಲಂಬಿಸಿ) ಅನುಭವದ ನಂತರ ₹40,000–₹70,000 ಅಥವಾ ಅದಕ್ಕಿಂತ ಹೆಚ್ಚಿನ ಸಂಬಳ ಪಡೆಯುವ ಅವಕಾಶವಿದೆ.ಮುಂದಿನ ವಿದ್ಯಾಭ್ಯಾಸ

M.Sc. Operation Theatre Technology
Hospital Administration
MBA in Healthcare Management
ವಿವಿಧ ವಿಶೇಷ ತರಬೇತಿ (Specialized Certifications)

## ಪುರಸಭೆ ಮಾಜಿ ಸದಸ್ಯ ಬಡಿಗೇರಗೆ ಸನ್ಮಾನ



o ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಪಟ್ಟಣದಲ್ಲಿ ಅಮ್ಮಾ ಫೌಂಡೇಶನ್ ವತಿಯಿಂದ ಶನಿವಾರ ಶ್ರೀ ಕಾಳಿಕಾ ದೇವಸ್ಥಾನದಲ್ಲಿ ಹಮ್ಮಿಕೊಂಡ ಬೃಹತ್ ರಕ್ತದಾನ ಶಿಬಿರದಲ್ಲಿ ತಾಳಿಕೋಟಿ ಪುರಸಭೆ ಮಾಜಿ ಸದಸ್ಯ ಸಮಾಜ ಸೇವಕ ಮುದುಕಪ್ಪ ಬಡಿಗೇರ ಇವರನ್ನು ಫೌಂಡೇಶನ್ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಈ ಸಮಯದಲ್ಲಿ ಫೌಂಡೇಶನ್ ಅಧ್ಯಕ್ಷರಾದ ಬಸಮ್ಮಾ ಕಾಶೀರಾಯ ಮಣ್ಣೂರ, ಉಪಾಧ್ಯಕ್ಷೆ ಸುರೇಖಾ ಬಿಳೇಭಾವಿ, ಕಾರ್ಯದರ್ಶಿ ಸುಮಂಗಲಾ ಕೋಳೂರ, ಪದಾಧಿಕಾರಿಗಳಾದ ಸುರೇಖಾ ಸಾಲಂಕಿ, ಅನಿತಾ ಸಜ್ಜನ್ ಡಾ. ಗಂಗಾಂಬಿಕಾ ಪಾಟೀಲ, ಗೀತಾ ಪತ್ತಾರ, ಚೆನ್ನಮ್ಮ ಕತ್ತಿ, ಗುರುಬಾಯಿ ಮಣ್ಣೂರು ಹಾಗೂ ಜ್ಯೋತಿಬಾ ಕೊಡಗೆ ಇದ್ದರು.

# ಪಾಂಡುರಂಗ ವಿಠಲ ಪ್ರವಚನ ಕಾರ್ಯಕ್ರಮ ಸಂಪನ್ನ

o ನೈಜ್ಯ ದೆಸೆ ನ್ಯೂಸ್

ತಾಳಿಕೋಟೆ:ಪಟ್ಟಣದ ಪಾಂಡುರಂಗ ವಿಠಲ ಮಂದಿರ ಟ್ರಸ್ಟ್, ವತಿಯಿಂದ ಆಷಾಢ ಏಕಾದಶಿ ನಿಮಿತ್ತವಾಗಿ ಆಯೋಜಿಸಿದ್ದ " ಪಾಂಡುರಂಗ ವಿಠಲ" ಪ್ರವಚನ ಕಾರ್ಯಕ್ರಮವು ಶನಿವಾರ ಮಂಗಲವಾಯಿತು.

ಐದು ದಿನಗಳ ಕಾಲ ನಡೆದ ಪ್ರವಚನ ಕಾರ್ಯಕ್ರಮವನ್ನು ರನ್ನಬೆಳಗಲಿಯ ಸಿದ್ದರಾಮ ಶಿವಯೋಗಿಯವರು ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಭಕ್ತಿಯೆಂದರೆ ನಿರ್ಮಲವಾದುದು, ನಿಷ್ಕಾಮದಿಂದ ಕೂಡಿದ್ದು ಭಗವಂತನ ಮೇಲೆ ವಿಶೇಷ ಪ್ರೀತಿ, ವಿಶ್ವಾಸ, ನಂಬಿಗೆ, ಭಕ್ತಿ ಇರಬೇಕು ಅದಕ್ಕೆ ಉದಾಹರಣೆ ಸತಿ ಸಕ್ಕೂಬಾಯಿ, ಪಾಂಡುರಂಗನ ಮೇಲೆ ಅಪಾರ ಭಕ್ತಿ, ಅವಳ ಭಕ್ತಿಗೆ ಮೆಚ್ಚಿ ಪಾಂಡುರಂಗನೇ ಅವಳ ಜೊತೆ ನಿಂತನು. ದೇವರು ಭಕ್ತವತ್ಸಲನಾಗಿದ್ದಾನೆ ಎಂದರು. ಕುಟುಂಬದಲ್ಲಿ ಅತ್ತೆ-ಸೊಸೆ ವೈರಿಗಳಲ್ಲ,



ಇಬ್ಬರೂ ಆ ಕುಟುಂಬದ ಅಭಿವೃದ್ಧಿಗೆ ಬಂದವರು ಎಂಬುದನ್ನು ಅರಿತು ಸಹಬಾಳ್ವೆ ನಡೆಸಬೇಕು. ಅತ್ತೆ ತಾಯಿಯಾಗಬೇಕು ಸೊಸೆ ಮಗಳಾಗಬೆಕು ಅಂತಹ ಪ್ರೀತಿ ತುಂಬಿದ ಮನೆಯಲ್ಲಿ ಮಾತ್ರ ಭಗವಂತನು ನೆಲೆ ನಿಲ್ಲುತ್ತಾನೆ ಎಂದರು, ವೇದಿಕೆಯಲ್ಲಿದ್ದ ಕೆಸರಟ್ಟಿಯ ಸೋಮಲಿಂಗ ಶಿವಯೋಗಿಯವರು ಮಾತನಾಡಿ, ಪ್ರವಚನಗಳು ಮನಸ್ಸಿನ ಭಾವವನ್ನು ಪರಿಶುದ್ದಗೊಳಿಸುತ್ತವೆ. ಮನಸ್ಸಿನ ನಿಜ ಸೌಂದರ್ಯ ಹೆಚ್ಚುತ್ತದೆ. ಪ್ರವಚನಗಳು ಭಕ್ತಿಯ ಉದ್ದೀಪನಗೊಳಿಸುವ ಕೆಂದ್ರಗಳಾಗಿವೆ. ಪ್ರವಚನಗಳಿಗೆ ತಾಯಂದಿರು ಬರುವಾಗ ತಮ್ಮ ಮಕ್ಕಳನ್ನೂ ಕರೆತನ್ನಿರಿ ಅವರಲ್ಲಿ ನಮ್ಮ ಸಂಸ್ಕೃತಿ, ಸಂಸ್ಕಾರ ತುಂಬಲು ಪ್ರವಚನ ನೆರವಾಗುತ್ತವೆ. ಮನೆಯಲ್ಲಿ ಮಕ್ಕಳಿಗೆ ನಮ್ಮ ಧರ್ಮ, ಆಚಾರ, ವಿಚಾರಗಳು, ಹಬ್ಬಗಳು ಅವುಗಳ ಮಹತ್ವ ತಿಳಿಸಿಕೊಡಿ, ಅವೆಲ್ಲ ನಮ್ಮನ್ನು ಸತ್ಯದ ಮಾರ್ಗದತ್ತ ಕರೆದೊಯ್ಯುತ್ತವೆ ಎಂದರು. ವೇದಿಕೆಯಲ್ಲಿ ವೇದಮೂರ್ತಿ ವಸಂತ ಜೋಶಿ ಇದ್ದರು. ಕಾರ್ಯಕ್ರಮದಲ್ಲಿ ಪಾಂಡುರಂಗ ವಿಠಲ ಮಂದಿರ ಟ್ರಸ್ಟ್ನ ಅಧ್ಯಕ್ಷ ಹಾಗೂ ಇತರ ಪದಾಧಿಕಾರಿಗಳು, ದೇವಸ್ಥಾನದ ಅರ್ಚಕರು, ನೂರಾರು ಭಕ್ತಾದಿಗಳು ಪಾಲ್ಗೊಂಡಿದ್ದರು. ಐದು ದಿನಗಳ ಕಾಲ ಪ್ರತಿದಿನವೂ ಒಂದು ವಿಶೇಷ ಖಾದ್ಯವನ್ನು ಪ್ರಸಾದ ರೂಪದಲ್ಲಿ ವಿತರಿಸಿದ್ದು ಮೆಚ್ಚುಗೆಗೆ ಪ್ರಾಪ್ತವಾಯಿತು. ಸಂಗಮೇಶ ಪಾಲಕಿ ಸ್ವಾಗತಿಸಿದರು., ದಿನಕರ ಜೋಶಿ ನಿರ್ವಹಿಸಿದರು. ಸಂಭಾಜಿ ವಾಡಕರ ವಂದಿಸಿದರು. ಸನ್ಮಾನ : ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ಪ್ರಮುಖರನ್ನು ಗೌರವಿಸಲಾಯಿತು. ಕೆಸರಟ್ಟಿ ಸೋಮಲಿಂಗ ಶಿವಯೋಗಿಗಳು -(ಧರ್ಮ ಪರಿವರ್ತನೆ ಅಭಿಯಾನ, ಬಂಜಾರ ಸಮುದಾಯದಲ್ಲಿ ಧರ್ಮ ಜಾಗೃತಿ)ಶರಣಬಸಪ್ಪ ಶಿ.ಗಡೆದ ಮುಖ್ಯ ಶಿಕ್ಷಕ, ಸರ್ಕಾರಿ ಉರ್ದು ಪ್ರೌಢಶಾಲೆ ಹುಣಶ್ಯಾಳ (ಪರಿಸರ ಜಾಗೃತಿ, ಸಂರಕ್ಷಣೆ.)ಡಾ .ಹರಿರಾಮು ಪಳನಿಸ್ವಾಮಿ. (ವೈದ್ಯಕೀಯ)ಇಂದಿರಾ ಭವಾನಸಿಂಗ. ಹಜೇರಿ. (ಐಐಟಿ ಆಯ್ಕೆ ಭುವನೇಶ್ವರ)ಸಂಜೀವ ಕದಂ. (ಕೈಲಾಸಧಾಮ ನಿರ್ವಹಣೆ , ಸಮಾಜ ಸೇವೆ.)ಗಾಗಿ ಗೌರವಿಸಿ ಸನ್ಮಾನಿಸಲಾಯಿತು.

# ಹೃದಯಾಘಾತಕ್ಕೆ ಮುಂಜಾಗ್ರತೆ ಅಗತ್ಯ: ಡಾ.ಸದಾನಂದ

o ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಇಂದು ಹೃದಯಾಘಾತದ ಪ್ರಕರಣಗಳು ದಿನದಿಂದ ದಿನ ಹೆಚ್ಚುತ್ತಲೇ ಇವೆ ಅದರಲ್ಲಿಯೂ ಯುವಜನತೆ ಇದಕ್ಕೆ ಹೆಚ್ಚಾಗಿ ಬಲಿಯಾಗುತ್ತಿರುವುದು ಆತಂಕದ ವಿಷಯವಾಗಿದೆ. ಇದನ್ನು ನಿಯಂತ್ರಿಸಲು ಮುಂಜಾಗ್ರತಾ ಕ್ರಮ ವಹಿಸುವುದು ಅತ್ಯಗತ್ಯವಾಗಿದೆ ಎಂದು ಡಾ.ಸದಾನಂದ ಇಂಡಿ ಹೇಳಿದರು. ಭಾನುವಾರ ಪಟ್ಟಣದ ಶ್ರೀ ಕಾಳಿಕಾದೇವಿ ದೇವಸ್ಥಾನದಲ್ಲಿ ಬಿ ಎಲ್ ಡಿ ಇ (ಡೀಮ್ಡ್ ವಿಶ್ವವಿದ್ಯಾಲಯ), ಶ್ರೀ ಬಿ ಎಂ ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ ವಿಜಯಪುರ ಮತ್ತು ಸೇಂಟ್ ಜಾನ್ ಆಂಬುಲೆನ್ಸ್ ತಾಳಿಕೋಟಿ ಇವರ ಸಹಯೋಗದಲ್ಲಿ ಹಮ್ಮಿಕೊಂಡ ಉಚಿತ ಹೃದಯ ಆರೋಗ್ಯ ತಪಾಸಣಾ ಶಿಬಿರದಲ್ಲಿ ಅವರು



ಮಾತನಾಡಿದರು.ಸೇಂಟ್ ಜಾನ್ ಆಂಬುಲೆನ್ಸ್ ಉಪಾಧ್ಯಕ್ಷ ಡಾ.ವಿ.ಎಸ್. ಕಾರ್ಚಿ ಮಾತನಾಡಿ ಇಲ್ಲಿಯವರೆಗೆ ಸೇಂಟ್ ಜಾನ್ ಅಂಬುಲೆನ್ಸ್ ವತಿಯಿಂದ ಸುಮಾರು7000 ಜನರಿಗೆ ಪ್ರಥಮ ಚಿಕಿತ್ಸೆ ಒದಗಿಸಲಾಗಿದೆ ಎಂದು ತಿಳಿಸಿದರು.ಬಿಎಲ್ ಡಿಇ ವೈದ್ಯಕೀಯ ವಿಭಾಗದ ಆಡಳಿತಾಧಿಕಾರಿ ಶಾಂತೇಶ ಸಲಗರ ಮಾತನಾಡಿ, ಬಿ.ಎಮ್.ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಹೆಚ್ಚಿನ ಆರೋಗ್ಯದ ಚಿಕಿತ್ಸೆಗಳ ಅವಶ್ಯಕತೆ ಇದ್ದರೆ ಅದನ್ನು ಉಚಿತವಾಗಿ ನಿರ್ವಹಿಸಲಾಗುತ್ತದೆ.ಗರ್ಭಿಣಿಯರಿಗೆ ಎಲ್ಲಾ ರೀತಿಯ ಸೌಲಭ್ಯವನ್ನು ಒದಗಿಸಲಾಗುತ್ತದೆ ಎಂದು ತಿಳಿಸಿದ ಅವರು ಚಿಕ್ಕ ಮಕ್ಕಳ ಹೃದಯದ ಚಿಕಿತ್ಸೆಗೆ ತಿಂಗಳಲ್ಲಿ ಎರಡು ಬಾರಿ ಬೆಂಗಳೂರಿನ ಖ್ಯಾತ ವೈದ್ಯರು ಬಿಎಲ್ ಡಿಇ ಸುಪರ್ ಸ್ಪೇಷಾಲಿಟಿ ಆಸ್ಪತ್ರೆಗೆ ಭೇಟಿ ನೀಡುತ್ತಾರೆ.ಹೀಗಾಗಿಯಾದಗಿರಿ,ಕಲಬುರ್ಗಿ,ವಿಜಯಪುರ,ಬಾಗಲಕೋಟೆ ಜಿಲ್ಲೆಗಳ ಜನರು ಇದರಲಾಭ ಪಡೆಯುತ್ತಿದ್ದಾರೆ ಎಂದರು. ವೇದಿಕೆಯಲ್ಲಿ ಡಾ.ಗಣೇಶ ಥರ್ಸೆ,ಡಾ.ಶಂಕರ ಕುರಳ್ಳಿ,ಡಾ.ಆಯಿಷಾ ಆಚಾರ್ಯ,ರವೀಕುಮಾರ ಪಾಟೀಲ,ಶ್ರೀನಿವಾಸ ಸೋನಾರ,ರಾಜು ಸಜ್ಜನ ಇತರರು ಇದ್ದರು.ಕಾರ್ಯಕ್ರಮದಲ್ಲಿ ಡಾ.ಆನಂದ ಭಟ್,ಡಾ.ಎ.ಎ..ನಾಲಬಂದ,ಡಾ.ನಜೀರ ಕೋಳ್ಯಾಳ,ಡಾ.ರವಿಕುಮಾರ ಅಗರವಾಲ,ಡಾ. ಗಂಗಾಂಬಿಕಾ ಪಾಟೀಲ,ಅಶೋಕ ಬಳಗಾನೂರ,ರಾಮನಗೌಡ ಬಾಗೇವಾಡಿ,ಚೌಧರಿ,ಗುರು ಸಜ್ಜನ ,ಕುಮಾರ ಸುರಪುರ ಉಪಸ್ಥಿತರಿದ್ದರು. ತಾಳಿಕೋಟೆ ಹಾಗೂ ಸುತ್ತಮುಲಿನತ್ತಲಿನ ಗ್ರಾಮಗಳ 110ಕ್ಕೂ ಹೆಚ್ಚು ಜನರು ಉಚಿತ ಹೃದಯ ಆರೊಗ್ಯ ತಪಾಸಣೆ ಶಿಬಿರದ ಸದುಪಯೊಗ ಪಡೆದುಕೊಂಡರು.ಈ ಸಂದರ್ಭದಲ್ಲಿ ಉಚಿತವಾಗಿ ರಕ್ತ ತಪಾಸಣೆ,ಬಿಪಿ ತಪಾಸಣೆ ಹಾಗೂ ಇಸಿಜಿಯನ್ನು ಮಾಡಿ, ಮಾತ್ರೆಗಳನ್ನು ಉಚಿತವಾಗಿ ನೀಡಿಲಾಯಿತು. ಶಿಕ್ಷಕ ಸಾಹೇಬಗೌಡ ಬಿರಾದಾರ ಸ್ವಾಗತಿಸಿದರು, ಸಾಹಿತಿ ಶ್ರೀಕಾಂತ ಪತ್ತಾರ ನಿರೂಪಿಸಿದರು. ಬಸವೇಶ್ವರ ಉತ್ಸವ ಸಮಿತಿ ಅಧ್ಯಕ್ಷ ಮಹಾಂತೇಶ ಮುರಾಳ ವಂದಿಸಿದರು.

### ಹಾರಾಪುರ ಸರ್ಕಾರಿ ಪ್ರೌಢ ಶಾಲಾ ಮಕ್ಕಳಿಗೆ ಸಮಾಜ ಸೇವಕ ಚನ್ನಪ್ಪ ಕೆ. ನೇತೃತ್ವದಲ್ಲಿ ಸ್ಕೂಲ್ ಬ್ಯಾಗ್, ಪುಸ್ತಕ ವಿತರಣೆ

# ಶಿಕ್ಷಣವೇ ಪ್ರಗತಿಯ ಮೂಲಧನ – ಶ್ರೀ ಮಾದಯ್ಯಸ್ವಾಮೀಜಿ

o ನೈಜ್ಯ ದೆಸೆ ನ್ಯೂಸ್

ಮಸ್ಕಿ : ಸಮೀಪದ ಹಾರಾಪುರ ಗ್ರಾಮದಲ್ಲಿರುವ ಸರ್ಕಾರಿ ಪ್ರೌಢ ಶಾಲಾ ಮಕ್ಕಳಿಗೆ ಸಮಾಜ ಸೇವಕ ಚನ್ನಪ್ಪ ಕೆ. ನೇತೃತ್ವದಲ್ಲಿ ಬೆಂಗಳೂರಿನ 'ಬೀಯಿಂಗ್ ಸೋಶಿಯಲ್' ಸಂಸ್ಥೆಯ ಸಹಯೋಗದೊಂದಿಗೆ ವಿದ್ಯಾರ್ಥಿಗಳಿಗೆ ಸ್ಕೂಲ್ ಬ್ಯಾಗ ಹಾಗೂ ಪುಸ್ತಕಗಳನ್ನು ವಿತರಣೆ ಮಾಡಲಾಯಿತು.ಈ ಸಂದರ್ಭದಲ್ಲಿ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದ್ದ ತುರ್ವಿಹಾಳನ ಶ್ರೀ ಮಾದಯ್ಯ ಸ್ವಾಮೀಜಿ ಆಶೀರ್ವಚನ ನೀಡಿ ಪಟ್ಟಣ ಪ್ರದೇಶದಲ್ಲಿ ವಾಸಿಸುವ ಮಕ್ಕಳಿಗೆ ವಿದ್ಯಾಭ್ಯಾಸಕ್ಕಾಗಿ ಅನೇಕ ಸೌಲಭ್ಯಗಳು ದೊರೆಯುತ್ತವೆ ಆದರೆ ಗ್ರಾಮೀಣ ಪ್ರದೇಶದಲ್ಲಿ ವಿದ್ಯಾಭ್ಯಾಸ ಮಾಡುವ ಮಕ್ಕಳಿಗೆ ಅನೇಕ ಸಮಸ್ಯೆಗಳು ಎದುರಾಗುತ್ತವೆ



ಆದ್ದರಿಂದ ಸಮಾಜಮುಖಿ ಕಾರ್ಯಾ ಮಾಡುವ ಇಂತಹ ಸಂಸ್ಥೆಗಳು ಇನ್ನಷ್ಟು ಬೆಳೆಯಬೇಕು ಚನ್ನಪ್ಪ ಕೆ. ಅವರ ನಾಯಕತ್ವದಲ್ಲಿ ನಡೆಯುತ್ತಿರುವ ಇಂತಹ ಸಮಾಜಮುಖಿ ಕೆಲಸಗಳು ಅಭಿನಂದನೀಯ" ಎಂದು ಬಣ್ಣಿಸಿ, ಶಿಕ್ಷಣದ ಮಹತ್ವದ ಕುರಿತು ವಿದ್ಯಾರ್ಥಿಗಳಿಗೆ ದಾರಿದೀಪವಾಗುವ ಮಾತುಗಳನ್ನಾಡಿದರು.ಗ್ರಾಮೀಣ ಮಕ್ಕಳಿಗೆ ಸೂಕ್ತ ಪ್ರೋತ್ಸಾಹ ಸಿಕ್ಕರೆ ಸಾಧನೆ ಮಾಡಲು ಸಾಧ್ಯ ಎಂದು ಹೇಳಿದರು. ಈ ಸಂದರ್ಭದಲ್ಲಿ ಸಮಾಜ ಸೇವಕರಾದ ಚೆನ್ನಪ್ಪ ಕೆ ಮಾತನಾಡಿ ಮುಂಬರುವ ದಿನಗಳಲ್ಲಿ ನಾವೆಲ್ಲರೂ ಆರ್ಥಿಕವಾಗಿ ಸದೃಢರಾಗಲು ಹಾಗೂ ದೇಶವನ್ನು ಅತ್ಯಂತ ಬಲಶಾಲಿಯಾಗಿ ಕಟ್ಟಲು ಶಿಕ್ಷಣದ ಅವಶ್ಯಕತೆ ಇದೆ ಆದ್ದರಿಂದ ಮಕ್ಕಳು ಅತ್ಯಂತ ಶ್ರಮವಹಿಸಿ ವಿದ್ಯಾಭ್ಯಾಸ ಮಾಡಿ ಮುಂಬರುವ ದಿನಗಳಲ್ಲಿ ಉನ್ನತ ಸ್ಥಾನಮಾನ ಪಡೆದುಕೊಂಡು ಸಮಾಜದ ಒಳತಿಗಾಗಿ ಶ್ರಮಿಸಬೇಕು ಎಂದು ಹೇಳಿದರು.ಗ್ರಾಮದ ಪ್ರತಿಯೊಂದು ಮಗುವಿಗೂ ಗುಣಮಟ್ಟದ ಶಿಕ್ಷಣ ಮತ್ತು ಸೂಕ್ತ ಸೌಲಭ್ಯ ಸಿಗಬೇಕು ಎಂಬುದೇ ನಮ್ಮ ಆಶಯ. ಮುಂದಿನ ದಿನಗಳಲ್ಲೂ ಮಕ್ಕಳ ಶೈಕ್ಷಣಿಕ ಬೆಳವಣಿಗೆಗೆ ನಮ್ಮ ಬೆಂಬಲ ಸದಾ ಇರಲಿದೆ" ಎಂದು ತಿಳಿಸಿದರು.ಜೂನಿಯರ್ ವಿಷ್ಣುವರ್ಧನ್ ಕಲಾ ಪ್ರದರ್ಶನ:ಕಾರ್ಯಕ್ರಮದಲ್ಲಿ ವಿಶೇಷ ಆಕರ್ಷಣೆಯಾಗಿ ಭಾಗವಹಿಸಿದ್ದ ಜೂನಿಯರ್ ವಿಷ್ಣುವರ್ಧನ್ ಅವರು ತಮ್ಮ ವಿಶಿಷ್ಟ ಶೈಲಿಯ ಅಭಿನಯ ಮತ್ತು ಸಂಭಾಷಣೆಗಳ ಮೂಲಕ ಮಕ್ಕಳು ಹಾಗೂ ಗ್ರಾಮಸ್ಥರನ್ನು ರಂಜಿಸಿ, ಸಮಾರಂಭಕ್ಕೆ ವಿಶೇಷ ಮೆರುಗು ನೀಡಿದರು.ಸನ್ಮಾನ : ಕಾರ್ಯಕ್ರಮದಲ್ಲಿ ಸಂಸ್ಥೆಯ ವತಿಯಿಂದ ತುರುವಿಹಾಳ ಪೊಲೀಸ್ ಠಾಣೆಯ ಪಿಎಸ್ಐ ಸುಜಾತಾ ಸೇರಿದಂತೆ ಇನ್ನಿತರರಿಗೆ ಸನ್ಮಾನಿಸಿ ಗೌರವಿಸಲಾಯಿತು ಈ ಸಂದರ್ಭದಲ್ಲಿ ಶಾಲೆಯ ಎಸ್ ಡಿ ಎಂ ಸಿ ಅಧ್ಯಕ್ಷ ಅಂಬರೇಶ್, ಬೆಂಗಳೂರಿನ 'ಬೀಯಿಂಗ್ ಸೋಶಿಯಲ್' ಸಂಸ್ಥೆಯ ದಾನಿಗಳಾದ ಡಾ. ಪ್ರವೀಣ್ ಕುಮಾರ್ ಶುಕ್ಲಾ, ಶೈಲೀ,ಸುಪ್ರೀತಾ,ಹೀರಾಗ್ರಾಮದ ಹನುಮಂತ್ರಾಯ ಗೌಡ ಪಾಟೀಲ್,ಮಹಾಂತೇಶ ಸಾಹುಕಾರ್ ಹೀರಾ, ಮುಖಂಡರಾದ ಬಸವರಾಜ ದಳಪತಿ, ಬಸವರಾಜ ಬಂಕದಮನಿ, ರಾಜು ಹಟ್ಟಿ, ಗ್ರಾಮ ಆಡಳಿತಾಧಿಕಾರಿ ವೀರೇಶ್, ಶಾಲೆಯ ಶಾಲೆಯ ಶಿಕ್ಷಕರು ಸೇರಿದಂತೆ ಇನ್ನಿತರರು ಇದ್ದರು.

# ಕಾರ್ಗಿಲ್ ವಿಜಯ್ ದಿವಸ್ – ಭಾರತದ ಶೌರ್ಯ, ತ್ಯಾಗ ಮತ್ತು ವಿಜಯದ ಸ್ಮರಣೆ*


## "ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ ವೀರ ಯೋಧರನ್ನು ಸ್ಮರಿಸುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ."

o ನೈಜ್ಯ ದೆಸೆ ನ್ಯೂಸ್

ಪ್ರತಿ ವರ್ಷ ಜುಲೈ 26ರಂದು ಭಾರತದಲ್ಲಿ ಕಾರ್ಗಿಲ್ ವಿಜಯ್ ದಿವಸ್ವನ್ನು ಅತ್ಯಂತ ಗೌರವ ಮತ್ತು ಹೆಮ್ಮೆಯಿಂದ ಆಚರಿಸಲಾಗುತ್ತದೆ. 1999ರಲ್ಲಿ ನಡೆದ ಕಾರ್ಗಿಲ್ ಯುದ್ಧದಲ್ಲಿ ಭಾರತೀಯ ಸೇನೆ ಸಾಧಿಸಿದ ಐತಿಹಾಸಿಕ ವಿಜಯವನ್ನು ಸ್ಮರಿಸುವ ದಿನವೇ ಕಾರ್ಗಿಲ್ ವಿಜಯ್ ದಿವಸ್. ಈ ದಿನವು ಕೇವಲ ವಿಜಯದ ಸಂಕೇತವಲ್ಲ; ದೇಶಕ್ಕಾಗಿ ತಮ್ಮ ಜೀವವನ್ನೇ ಅರ್ಪಿಸಿದ ವೀರ ಯೋಧರ ಧೈರ್ಯ, ತ್ಯಾಗ, ದೇಶಪ್ರೇಮ ಮತ್ತು ಕರ್ತವ್ಯನಿಷ್ಠೆಗೆ ನಮನ ಸಲ್ಲಿಸುವ ದಿನವಾಗಿದೆ.*ಕಾರ್ಗಿಲ್ ಯುದ್ಧದ ಹಿನ್ನೆಲೆ :* 1999ರ ಮೇ ತಿಂಗಳಲ್ಲಿ ಪಾಕಿಸ್ತಾನದ ಸೈನಿಕರು ಮತ್ತು ಉಗ್ರರು ಜಮ್ಮು-ಕಾಶ್ಮೀರದ ಕಾರ್ಗಿಲ್, ದ್ರಾಸ್, ಬಟಾಲಿಕ್ ಹಾಗೂ ಸುತ್ತಮುತ್ತಲಿನ ಎತ್ತರದ ಪರ್ವತ ಪ್ರದೇಶಗಳಿಗೆ ಅಕ್ರಮವಾಗಿ ನುಗ್ಗಿ ಭಾರತೀಯ ಪ್ರದೇಶಗಳನ್ನು ಆಕ್ರಮಿಸಿಕೊಂಡರು. ಹಿಮಪಾತದ ಸಮಯದಲ್ಲಿ ಭಾರತೀಯ ಸೇನೆಯ ಕೆಲವು ಮುಂಚೂಣಿ ಶಿಬಿರಗಳು ತಾತ್ಕಾಲಿಕವಾಗಿ ಖಾಲಿಯಾಗಿದ್ದ ಸಂದರ್ಭವನ್ನು ದುರುಪಯೋಗಪಡಿಸಿಕೊಂಡು ಈ ಒಳನುಸುಳುವಿಕೆ ನಡೆಸಲಾಯಿತು.ಈ ಅಕ್ರಮ ಆಕ್ರಮಣವನ್ನು ಹಿಮ್ಮೆಟ್ಟಿಸಲು ಭಾರತೀಯ ಸೇನೆಯು "ಆಪರೇಷನ್ ವಿಜಯ್" ಎಂಬ ಮಹತ್ವದ ಸೈನಿಕ ಕಾರ್ಯಾಚರಣೆಯನ್ನು ಆರಂಭಿಸಿತು. ಭಾರತೀಯ ವಾಯುಪಡೆಯು "ಆಪರೇಷನ್ ಸಫೇದ್ ಸಾಗರ್" ಮೂಲಕ ಸೇನೆಗೆ ಬೆಂಬಲ ನೀಡಿತು. ಭಾರತೀಯ ಸೈನಿಕರು 16,000 ರಿಂದ 18,000 ಅಡಿ ಎತ್ತರದ ಹಿಮಾವೃತ ಪರ್ವತಗಳಲ್ಲಿ ಅತ್ಯಂತ ಕಠಿಣ



ಪರಿಸ್ಥಿತಿಗಳಲ್ಲಿಯೂ ಅಪಾರ ಸಾಹಸ ಪ್ರದರ್ಶಿಸಿ ಶತ್ರುಗಳನ್ನು ಹಿಮ್ಮೆಟ್ಟಿಸಿದರು. *ಭಾರತೀಯ ಯೋಧರ ಶೌರ್ಯ :* ಕಾರ್ಗಿಲ್ ಯುದ್ಧದಲ್ಲಿ ಭಾರತೀಯ ಯೋಧರು ಅಸಾಧಾರಣ ಶೌರ್ಯ ಪ್ರದರ್ಶಿಸಿದರು. ತೀವ್ರ ಚಳಿ, ಕಡಿಮೆ ಆಮ್ಲಜನಕ, ದುರ್ಗಮ ಪರ್ವತ ಪ್ರದೇಶ ಮತ್ತು ಶತ್ರುಗಳ ನಿರಂತರ ದಾಳಿಗಳ ನಡುವೆಯೂ ಅವರು ತಮ್ಮ ಕರ್ತವ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದರು. ಅನೇಕ ಯೋಧರು ದೇಶಕ್ಕಾಗಿ ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದರು.ಈ ಯುದ್ಧದಲ್ಲಿ ಕ್ಯಾಪ್ಟನ್ ವಿಕ್ರಂ ಬಾತ್ರಾ, ಲೆಫ್ಟಿನೆಂಟ್ ಮನೋಜ್ ಕುಮಾರ್ ಪಾಂಡೆ, ಗ್ರೆನೇಡಿಯರ್ ಯೋಗೇಂದ್ರ ಸಿಂಗ್ ಯಾದವ್, ರೈಫಲ್‌ಮನ್ ಸಂಜಯ್ ಕುಮಾರ್ ಸೇರಿದಂತೆ




ಅನೇಕ ವೀರ ಯೋಧರು ಅಪಾರ ಸಾಹಸ ಮೆರೆದರು. ಅವರ ಶೌರ್ಯಕ್ಕೆ ಪರಮ ವೀರ ಚಕ್ರ ಸೇರಿದಂತೆ ಭಾರತದ ಅತ್ಯುನ್ನತ ಶೌರ್ಯ ಪ್ರಶಸ್ತಿಗಳು ಲಭಿಸಿವೆ. *ವಿಜಯದ ದಿನ :* ಸುಮಾರು ಎರಡು ತಿಂಗಳ ಕಾಲ ನಡೆದ ಭೀಕರ ಹೋರಾಟದ ನಂತರ ಭಾರತೀಯ ಸೇನೆ ಶತ್ರುಗಳನ್ನು ಸಂಪೂರ್ಣವಾಗಿ ಹಿಮ್ಮೆಟ್ಟಿಸಿ ಎಲ್ಲ ಪ್ರಮುಖ ಶಿಖರಗಳನ್ನು ಮರಳಿ ವಶಪಡಿಸಿಕೊಂಡಿತು. 1999ರ ಜುಲೈ 26ರಂದು ಭಾರತ ಕಾರ್ಗಿಲ್ ಯುದ್ಧದಲ್ಲಿ ಅಧಿಕೃತವಾಗಿ ವಿಜಯ ಸಾಧಿಸಿತು. ಈ ಐತಿಹಾಸಿಕ ವಿಜಯದ ನೆನಪಿಗಾಗಿ ಪ್ರತಿವರ್ಷ ಜುಲೈ 26ರಂದು ಕಾರ್ಗಿಲ್ ವಿಜಯ್ ದಿವಸ್ ಆಚರಿಸಲಾಗುತ್ತದೆ. *ಕಾರ್ಗಿಲ್ ವಿಜಯ್ ದಿವಸದ ಆಚರಣೆ :* ಈ ದಿನ ದೇಶದಾದ್ಯಂತ ಶಾಲೆಗಳು, ಕಾಲೇಜುಗಳು, ಸರ್ಕಾರಿ ಕಚೇರಿಗಳು ಹಾಗೂ ವಿವಿಧ ಸಂಸ್ಥೆಗಳಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ವೀರ ಯೋಧರಿಗೆ ಪುಷ್ಪನಮನ ಸಲ್ಲಿಸಲಾಗುತ್ತದೆ, ದೇಶಭಕ್ತಿ ಗೀತೆಗಳು, ಭಾಷಣಗಳು, ಪ್ರಬಂಧ ಸ್ಪರ್ಧೆಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. ಕಾರ್ಗಿಲ್‌ನ ಯುದ್ಧ ಸ್ಮಾರಕದಲ್ಲಿ ಹುತಾತ್ಮ ಯೋಧರಿಗೆ ಭಾರತೀಯ ಸೇನೆ ವಿಶೇಷ ಗೌರವ ಸಲ್ಲಿಸುತ್ತದೆ. *ಕಾರ್ಗಿಲ್ ವಿಜಯ್ ದಿವಸದ ಮಹತ್ವ :* ಕಾರ್ಗಿಲ್ ವಿಜಯ್ ದಿವಸ್ ನಮಗೆ ದೇಶಭಕ್ತಿ, ರಾಷ್ಟ್ರೀಯ ಏಕತೆ, ಶಿಸ್ತು, ಧೈರ್ಯ ಮತ್ತು ತ್ಯಾಗದ ಮೌಲ್ಯಗಳನ್ನು ನೆನಪಿಸುತ್ತದೆ. ದೇಶದ ಗಡಿಗಳನ್ನು ರಕ್ಷಿಸಲು ನಮ್ಮ ಯೋಧರು ಹಗಲು-ರಾತ್ರಿ ಎನ್ನದೆ ಸೇವೆ ಸಲ್ಲಿಸುತ್ತಿದ್ದಾರೆ ಎಂಬ ಅರಿವನ್ನು ಈ ದಿನ ಮೂಡಿಸುತ್ತದೆ. ಸ್ವಾತಂತ್ರ್ಯ ಮತ್ತು ಭದ್ರತೆಗಾಗಿ ಅವರು ನೀಡುತ್ತಿರುವ ತ್ಯಾಗವನ್ನು ಎಂದಿಗೂ ಮರೆಯಬಾರದು ಎಂಬ ಸಂದೇಶವನ್ನು ಈ ದಿನ ಸಾರುತ್ತದೆ. *ಉಪಸಂಹಾರ* : ಕಾರ್ಗಿಲ್ ವಿಜಯ್ ದಿವಸ್ ಭಾರತದ ಇತಿಹಾಸದಲ್ಲಿ ಚಿನ್ನದ ಅಕ್ಷರಗಳಲ್ಲಿ ಬರೆಯಲ್ಪಟ್ಟ ದಿನವಾಗಿದೆ. ಇದು ಭಾರತೀಯ ಸೇನೆಯ ಪರಾಕ್ರಮ, ಶೌರ್ಯ ಮತ್ತು ದೇಶಪ್ರೇಮದ ಜೀವಂತ ಸಂಕೇತವಾಗಿದೆ. ದೇಶಕ್ಕಾಗಿ ತಮ್ಮ ಅಮೂಲ್ಯ ಜೀವವನ್ನು ತ್ಯಾಗ ಮಾಡಿದ ಎಲ್ಲ ವೀರ ಯೋಧರಿಗೆ ನಾವು ಸದಾ ಋಣಿಯಾಗಿದ್ದೇವೆ. ಅವರ ಆದರ್ಶಗಳನ್ನು ಪಾಲಿಸುವುದು, ದೇಶದ ಏಕತೆ ಮತ್ತು ಅಖಂಡತೆಯನ್ನು ಕಾಪಾಡುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ.ವೀರ ಯೋಧರ ತ್ಯಾಗವೇ ನಮ್ಮ ದೇಶದ ಹೆಮ್ಮೆ; ಅವರ ಬಲಿದಾನ ಎಂದೆಂದಿಗೂ ಸ್ಮರಣೀಯ ಜೈ ಜವಾನ್ □ ಜೈ ಹಿಂದ್!ಲೇಖನ : ಲಾಜರ್ ಸಿರಿಲ್

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101